ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೭ ಮಾರ್ಚ್-೨೦೦೭ ಸಂಚಿಕೆ-೮

ಕಾವೇರಿ ಸುಳಿಯಲ್ಲಿ ಕರ್ನಾಟಕ, ವಿವಾದದ ಸುಳಿಯಲ್ಲಿ ಪರಿಹಾರ



ಕಾವೇರಿ ಸುಳಿಯಲ್ಲಿ ಕರ್ನಾಟಕ, ಗೊಂದಲದ ಸುಳಿಯಲ್ಲಿ ಪರಿಹಾರ

–ಸುರೇಂದ್ರ ಕೌಲಗಿ ಪುಟ– ೩

ಕಳೆದ ೮೨ ವರ್ಷಗಳಿಂದ ತಮಿಳುನಾಡು ಮತ್ತು ಕರ್ನಾಟಕದ ಮಧ್ಯೆ ಕಾವೇರಿ ನದಿ ನೀರಿನ ಉಪಯೋಗ ಜ್ವಲಂತ ಸಮಸ್ಯೆಯಾಗಿ ಇದೆ. ಮತ್ತು ಮುಂದೆಯೂ ಸಹ ಜ್ವಲಂತ ಸಮಸ್ಯೆಯಾಗಿ ಉಳಿಯುವ ಸಂಭವವಿದೆ. ಇಂಥ ಜಟಿಲ ಸಮಸ್ಯೆಯ ಪರಿಹಾರ ಮರೀಚಿಕೆಯಾಗಿಯೇ ಉಳಿಯುತ್ತಾ ಬಂದಿರುವುದು ಶೋಚನೀಯ. ಎಂಥ ಸಮಸ್ಯೆಗೂ ಪರಿಹಾರವಿರಲೇ ಬೇಕಾಗುತ್ತದೆ. ಅಂದರೆ ಪರಿಹಾರವನ್ನು ಕಂಡುಕೊಳ್ಳಬೇಕಾಗುತ್ತದೆ. ಈ ವಿಷಯವಾಗಿ ಕೆಲವು ಚಿಂತನೆಗಳು ಈ ಲೇಖನದಲ್ಲಿವೆ.

ಕರ್ನಾಟಕದ ವರ್ತಮಾನ ಪರಿಸ್ಥಿತಿಯ ಕುರಿತಾದ ಒಂದು ಚಿಂತನೆ

–ಪ್ರೊ.ಕೆ.ನಿಸಾರ್ ಅಹ್ಮದ್ ಪುಟ– ೯

ಇತ್ತೀಚಿನ ವರ್ಷಗಳಲ್ಲಿ ಕನ್ನಡ ಭಾಷೆ ಮತ್ತು ಕನ್ನಡಿಗರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳ ಸಮಗ್ರ ಚಿತ್ರಣ ಮತ್ತು ಕರ್ನಾಟಕಸ್ಥರು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಾಹಿತಿಯಾಗಿ, ಚಿಂತಕರಾಗಿ ಕನ್ನಡಭಾಷೆಯನ್ನು ತಮ್ಮದಾಗಿಸಿಕೊಂಡಿರುವ ಲೇಖಕರು ತಮ್ಮ ಅನಿಸಿಕೆಗಳನ್ನು ಸ್ಫುಟವಾಗಿ ಈ ಲೇಖನದಲ್ಲಿ ಹೇಳಿದ್ದಾರೆ.

ವೇದದ ದೃಷ್ಟಿಯಲ್ಲಿ ಭಗವಂತನ ಉಪಾಸನೆ

–ವಿನೋಬಾ ಪುಟ–೧೭

ವೇದ ಅಂತಿಮವಾಗಿ ಅನಾಸಕ್ತಿಯ ಮಾತನ್ನು ಹೇಳುತ್ತದೆ. ಅನಾಸಕ್ತಿ ಸಿದ್ಧಿಸಿದರೆ ಪರಮಾತ್ಮನ ಪ್ರಾಪ್ತಿಯಾಗುತ್ತದೆ. ಯಜ್ಞದಲ್ಲಿ ತಪ, ದಾನ ಮತ್ತು ಆಹುತಿ ಸಮಾವೇಶವಾಗುತ್ತದೆ. ಇತ್ಯಾದಿ ವಿಷಯಗಳ ಬಗ್ಗೆ ಬಹು ಮೌಲಿಕ ವಿಚಾರಗಳು ಸಾಧಕರಿಗೆ ಈ ಲೇಖನದಲ್ಲಿ ದೊರೆಯುತ್ತವೆ.

ಜನಪದ ವ್ಯಕ್ತಿ

ಕತ್ತಿಗಿಂತ ಲೇಖನಿ ಹರಿತ ಎಂದು ಸಾರುವ ಬೈರಾಗಿ ಪತ್ರಕರ್ತ

–ವಿಶ್ವೇಶ್ವರ ಭಟ್ ಪುಟ–೨೪

ಸರ್ಕಾರಗಳು ತಮ್ಮ ಯೋಜನೆಗಳನ್ನೇ ಮಾರ್ಪಡಿಸಿಕೊಳ್ಳುವಂತೆ ಮಾಡಿದ ಪತ್ರಕರ್ತರ ಸಾಲಿನಲ್ಲಿ ಸಾಯಿನಾಥ ಅಗ್ರಗಣ್ಯರು. ಅವರು ಬರೆದ 'ಪ್ರತಿಯೊಬ್ಬರೂ ಕ್ಷಾಮವನ್ನು ಪ್ರೀತಸುತ್ತಾರೆ' ಎಂಬ ಪುಸ್ತಕ ಅಂಥ ಮಹತ್ಕಾರ್ಯ ಮಾಡಿತು. ಮತ್ತು ಗ್ರಾಮಗಳ ಕುರಿತಾದ ಅಭಿವೃದ್ಧಿ ಯೋಜನೆಗಳ ಬಗ್ಗೆ ಹೊಸ ದೃಷ್ಟಿಕೋನವನ್ನು ಹೊಂದುವಂತೆ ಆ ಪುಸ್ತಕ ಮಾಡಿತು. ಓರ್ವ ಸಮಾಜಮುಖಿ ಪತ್ರಕರ್ತನ ಲೇಖನಿ ಎಷ್ಟು ಪರಿಣಾಮಕಾರಿಯಾಗಿರುತ್ತದೆಂಬುದನ್ನು ಈ ಲೇಖನ ಸಿದ್ಧಪಡಿಸುತ್ತದೆ.

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಮಾರ್ಚ್--೨೦೦೭

ಸಂಪುಟ-೭

ಸಂಚಿಕೆ-೮

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ-೫೭೧೪೩೧

ಜಿಲ್ಲಾ ಮಂಡ್ಯ

☏೦೮೨೩೭ ೨೯೮೭೫೪

e-mail - janapada@yahoo.com

ಕವನ

ಆ ಕೋಣೆಯಲ್ಲಿ ಅದು-
ಈ ಕೋಣೆಯಲ್ಲಿ ನಾನು
ನಡುವೆ ಸಿಮೆಂಟ್ ಗೋಡೆಯಂಥ ಮೌನ
ಆ ತುದಿಯಲ್ಲಿ ಅದು-ಈ ತುದಿಯಲ್ಲಿ ನಾನು
ನಡುವೆ ಹೆಪ್ಪುಗಟ್ಟಿದ ಶತಮಾನ
ರೆಕ್ಕೆ ಬಿಚ್ಚಲಾಗದೆ ನರಳುವ ಜೀವ ಅಲ್ಲಿ
ರೆಕ್ಕೆ ಮುಚ್ಚಲಾಗದೆ ಬಳಲುವ ಭಾವ ಇಲ್ಲಿ
ಎರಡರ ನಡುವೆ ಇರುಳಿನ ಮೆಟ್ಟಿಲು
ರೆಕ್ಕೆ ಬಡಿಯದೆ ದಿಕ್ಕು ದೊರಕುವುದೆಂತು?
ಮಂಜಿನಲ್ಲಿ ನೆನೆದ ಕಿರಣಗಳಂತೆ
ಮುದುಡಿದ ಆಸೆಗಳದರವು
ಅಗ್ಗಿಷ್ಟಿಕೆಯಲ್ಲಿ ಅವಿತ ಕಿಡಿಗಳಂತೆ
ಪೊರೆ ಬಿಡುತ್ತಿರುವ ಬಯಕೆಗಳು ನನ್ನವು
ಉಂಡೆಗಟ್ಟಿದ ನಿಟ್ಟುಸಿರುಗಳ ಮೇಲೆ
ಕಾಲುಜಾರಿ ಬಿದ್ದ ಆಲೋಚನೆಗಳವು
ಜಡವಾದ ನೋಟದ ಅಲೆಗಳ ಕೆಳಗೆ
ಸುರಳಿ ಸುತ್ತುತ್ತಿರುವ ಆಶಯಗಳಿವು
ಅನ್ವಯವಿಲ್ಲದ ತುದಿಗಳೆರಡು
ಆ ಕಡೆ ಅದು-ಈ ಕಡೆ ನಾನು
ಒಂದು -ಸಮಾಧಿಯೊಳಗಿನ ಚೈತನ್ಯ
ಮತ್ತೊಂದು- ಇಕ್ಕಟ್ಟಿನಲ್ಲಿರುವ ಪುಣ್ಯ

-ಡಾ॥ ಸಿ. ನಾರಾಯಣರೆಡ್ಡಿ.

ವಿಚಾರ ದೀಪ್ತಿ

ಅಂತರರಾಷ್ಟ್ರೀಯ ಜಲಹಂಚಿಕೆಗೆ ಸಂಬಂಧಪಟ್ಟ ಹೆಲ್ಸಂಕಿ ನಿಯಮಗಳು ಇರಲಿ, ನೀರಿನ ತಕರಾರಿಗೆ ಸಂಬಂಧಪಟ್ಟ ದೇಶಗಳು ಪರಸ್ಪರ ಮಾತನಾಡಿ ಒಂದು ಒಪ್ಪಂದಕ್ಕೆ ಬರಬೇಕು, ನದೀ ಬಯಲುಗಳ ಸಮಗ್ರ ಹಾಗೂ ಪರಸ್ಪರ ಪೂರಕ ಅಭಿವೃದ್ಧಿಗೆ ಒತ್ತು ನೀಡಬೇಕು, ಎಂದೇ ಈ ನಿಯಮಗಳಲ್ಲಿ ಅಭಿಪ್ರಾಯ ಸೂಚಿಸಲಾಗಿದೆ. ಬಲಿಷ್ಠ ರಾಷ್ಟ್ರ ಹಾಗೂ ಭಾರತಕ್ಕಿಂತ ಹೆಚ್ಚು ಉದ್ದದ ನದಿಗಳನ್ನು ಹೊಂದಿರುವ ಅಮೇರಿಕಾದಲ್ಲಿ ಆಂತರ ರಾಜ್ಯ ನದಿ ಅಥವಾ ನೀರಿನ ವಿವಾದಗಳನ್ನು ಸಂಬಂಧಪಟ್ಟ ರಾಜ್ಯಗಳ ನಡುವಣ ಒಪ್ಪಂದದ ಮೂಲಕವೇ ಬಗೆಹರಿಸುವ ಮಾರ್ಗವನ್ನು ಹೊಂದಿದೆ. ಅಲ್ಲಿನ ಸುಪ್ರಿಂಕೋರ್ಟ್ ನೀರಿನ ವಿಚಾರದಲ್ಲಿ ಹಸ್ತಕ್ಷೇಪ ನಡೆಸಿರುವ ಉದಾಹರಣೆಗಳೇ ಕಡಿಮೆ.

ರಾಜ್ಯ ರಾಜ್ಯಗಳೊಳಗೆ ನಡೆಯುವ ಒಪ್ಪಂದಗಳಗೆ ಶಾಸನದ ಮಾನ್ಯತೆಯನ್ನು ನೀಡುವ ವಿಧಾನ ಅಮೇರಿಕಾದ ಸಂವಿಧಾನದಲ್ಲಿಯೇ ಇದೆ. ಇದಕ್ಕೆ ಕಾರಣ ಯಾವ ಒಂದು ನದಿ ಮತ್ತು ಅದರ ಬಯಲು ಪ್ರದೇಶದ ಸ್ವರೂಪ ವಿಶಿಷ್ಟ ಬಗೆಯದಾಗಿರುತ್ತದೆ. ಇದು ಪ್ರಕೃತಿ ನಮಗೆ ನೀಡಿರುವ ಕೊಡುಗೆ. ಈ ಸ್ವರೂಪವನ್ನು ಮಾನವ ಅಣೆಕಟ್ಟು ನಿರ್ಮಿಸಿದ ಹಾಗೆ ನಿರ್ಮಾಣ ಮಾಡುವಹಾಗಿಲ್ಲ. ಹಾಗೆ ನಾವು ಸಾಧನೆಯನ್ನು ಮಾಡುತ್ತೇವೆ ಎಂದು ಹೊರಟರೆ ಅದು ನಿಸರ್ಗಕ್ಕೇ ಸವಾಲು ಹಾಕಿದ ಹಾಗೆ. ಹಾಗಾಗಿಯೇ ಇಂಥ ಪ್ರಕರಣಗಳಲ್ಲಿ ನ್ಯಾಯಾಂಗದ ಹಸ್ತಕ್ಷೇಪ ಬೇಡ ಎಂದು ಅಲ್ಲಿನವರ ಧೋರಣೆಯಾಗಿದೆ. ಈ ಧೋರಣೆ ಸಮಂಜಸವೂ ಆಗಿದೆ.

ಇದಕ್ಕೆ ಕಾರಣ ನೀರಿನ ಚಲನೆ; ನೀರಿನ ಚೆನ್ನಾಟ. ಪ್ರಕೃತಿಯ ಕೃಪೆ. ಕ್ಷಣಕ್ಷಣಕ್ಕೂ ನೀರಿನ ಪಾತ್ರ ಬದಲಾವಣೆ ಆಗಿಬಿಡುತ್ತದೆ. ಒಂದು ಕ್ಷಣ ಇದ್ದ ನೀರಿನ ಚಿಮ್ಮು ಮತ್ತೊಂದು ಕ್ಷಣ ಇರುವುದಿಲ್ಲ. ಒಂದು ಸಲ ಹೊರಳುವ ಹಾಗೆ ಮತ್ತೊಂದು ಸಲ ಹೊರಳುವುದಿಲ್ಲ. ಒಂದು ಸಲ ನೀರು ಮಿಂಚುತ್ತದೆ. ತುಂಬಿಕೊಳ್ಳುತ್ತದೆ. ಮತ್ತೊಂದು ಸಲ ನರಪೆತಲ ನಾರಾಯಣ ಯಾವಾಗಲೂ ನದಿ ತುಂಬಿಕೊಂಡು ಹರಿದರೆ ಚೆನ್ನ. ಆಗ ಅದರ ಗಾಂಭೀರ್ಯವೇ ಗಾಂಭೀರ್ಯ. ಧಿಮಾಕು ಎಂದರೆ ಧಿಮಾಕು. ಇಲ್ಲವೋ ಕೊಳೆತ ಮಂಡಲ ಆಗಿಬಿಡುತ್ತದೆ.

– ಶೇಷನಾರಾಯಣ

ಕಾವೇರಿ ಸುಳಿಯಲ್ಲಿ ಕರ್ನಾಟಕ, ವಿವಾದದ ಸುಳಿಯಲ್ಲಿ ಪರಿಹಾರ

- ಸುರೇಂದ್ರ ಕೌಲಗಿ

ಮಹಾಭಾರತದಲ್ಲಿ ಯಕ್ಷ ಕೇಳುವ ಪ್ರತಿಯೊಂದು ನಿಗೂಢವಾದ ಪ್ರಶ್ನೆಗೂ ಧರ್ಮರಾಜ ಧರ್ಮಸಮ್ಮತವಾದ, ಬಹು ತರ್ಕಬದ್ಧವಾದ, ಪ್ರಶ್ನಾತೀತವಾದ ಉತ್ತರ ಕೊಡುತ್ತಾನೆ. ನಮ್ಮೀ ೨೦ನೇ ಶತಮಾನದಲ್ಲಿ ಇಷ್ಟೊಂದು ವೈಜ್ಞಾನಿಕ, ತಾಂತ್ರಿಕ ಬೆಳವಣಿಗೆಗಳ ನಂತರವೂ, ಪ್ರಜಾತಾಂತ್ರಿಕ ವಿಚಾರಗಳು ಪ್ರಬುದ್ಧವಾಗಿರುವ ನಂತರವೂ, ಜಗತ್ತೆಲ್ಲ ಒಂದು ಗ್ರಾಮವೆಂಬ ಘೋಷಣೆ ಪ್ರಚಲಿತವಾಗುತ್ತಿರುವಾಗಲೂ, ಜಗತ್ತಿನ ಬೇರೆ-ಬೇರೆ ದೇಶಗಳಲ್ಲಿಯ ಜಲ ವಿವಾದಗಳು ಪರಿಹಾರ ಕಂಡ ನಂತರವೂ, ಮುಂದಿನ ಯುದ್ಧ ನೀರಿಗಾಗಿ ಎಂಬ ಮಾತನ್ನು ಶಾಲಾ ವಿದ್ಯಾರ್ಥಿಯಾಗಿ ಪ್ರತಿಯೊಬ್ಬರು ಮಾತಾಡುತ್ತಿರುವ ನಂತರವೂ, ಪ್ರಕೃತಿಯಲ್ಲಿ ಬಹಳಷ್ಟು ಏರುಪೇರುಗಳು ಆಗುತ್ತಿವೆ ಎಂಬ ಅನುಭವದ ನಂತರವೂ, ಹದಿನಾರು ವರ್ಷಗಳಷ್ಟು ತಿಣುಕಾಟದ ನಂತರವೂ, ಸಾವಿರ ಪುಟದ ಐದು ಸಂಪುಟಗಳ ತೀರ್ಪಿನ ನಂತರವೂ, ಕಾವೇರಿ ಜಲವಿವಾದದ ನ್ಯಾಯಾಧಿಕರಣದ ಸದಸ್ಯರೇ ಕೈ-ಕೈ ಮಿಲಾಯಿಸುವಂಥ ಪರಿಸ್ಥಿತಿ ನಿರ್ಮಾಣವಾಗಿದ್ದರೂ, ನೆರೆ ರಾಜ್ಯದ ತಮಿಳರು ಒಂದು ಶತ್ರು ದೇಶವನ್ನು ಬಿಟ್ಟು ಹೋಗುವಂಥ ರೀತಿಯ ಪರಿಸ್ಥಿತಿ ಉಂಟಾಗಿದ್ದರೂ, ಸುಮಾರು ನೂರು ವರ್ಷಗಳ ವಿವಾದದ ನಂತರವೂ ಕಾವೇರಿ ನದಿ ನೀರಿನ ಉಪಯೋಗದ ವಿಷಯ ಬಗೆ ಹರಿಯದೆ ಇನ್ನಷ್ಟು ವಿವಾದಕ್ಕೆ ಕಾರಣವಾಗುತ್ತಿರುವುದು ಅತ್ಯಂತ ನೋವಿನ ಸಂಗತಿ. ವಿವಾದದ ಪರಿಹಾರಕ್ಕೆ ರಚಿತಗೊಂಡಿದ್ದ ಸಿಂಗ್ ಅಧ್ಯಕ್ಷತೆಯ ನ್ಯಾಯಾಧಿಕರಣ ೧೬ ವರ್ಷ ಎರಡೂ ರಾಜ್ಯಗಳ ವಾದ-ಪ್ರತಿವಾದಗಳನ್ನು ಕೇಳಿ ಈ ವಿವಾದಕ್ಕೆ ಸಂಬಂಧಿಸಿದಂತೆ ಮೂರು ತಿಂಗಳ ಗಡುವಿನ ಲಕ್ಷ್ಮಣ ರೇಖೆ ಎಳೆದು ತನ್ನ ವರದಿಯನ್ನು ಕಾವೇರಿಯ ಪ್ರವಾಹದೊಳಕ್ಕೆ ಎಸೆದು ಮುಕ್ತವಾಗಿದೆ. ಕೇಂದ್ರ ಸರ್ಕಾರವು ನ್ಯಾಯಾಧಿಕರಣ ರಚಿಸಿ ವಿವಾದವನ್ನು ಹದಿನಾರು ವರ್ಷಗಳ ಕಾಲ ಕೊಳೆ ಹಾಕಿ ಯಾರಿಗೂ ಯಾವ ರೀತಿಯಲ್ಲೂ ಅರ್ಥವಾಗದಂಥ ಮತ್ತು ಬರಿ ವಿವಾದದ ಸುಳಿಯನ್ನು ನಿರ್ಮಿಸುವಂಥ ವರದಿಯನ್ನು ಎರಡು ರಾಜ್ಯಗಳ ಮುಂದೆ ಇಟ್ಟಿತು. ವಿವಿಧ ಪಕ್ಷಗಳ ರಾವಣನ ಸಂಯೋಜನೆಯಿಂದಾಗಿ ತನ್ನ ಸ್ವಂತಿಕೆಯನ್ನೇ ಕೇಂದ್ರ ಸರ್ಕಾರ ಕಳೆದುಕೊಂಡಿರುವುದರಿಂದ ಕಾವೇರಿ

ಜಲವಿವಾದವನ್ನು ಬಗೆಹರಿಸುವುದಕ್ಕೆ ಬೇಕಾದ ಪುರುಷಾರ್ಥ ಅದರಲ್ಲಿ ಇಲ್ಲವಾಗಿದೆ. ಇನ್ನು ವಿವಾದದಲ್ಲಿಯ ಎರಡು ಸರ್ಕಾರಗಳು ಅಂದರೆ ಕರ್ನಾಟಕ ಮಿಶ್ರತಳಿ ಸರ್ಕಾರ ಮತ್ತು ತಮಿಳುನಾಡು ಎಡಪಕ್ಷೀಯ ಸರ್ಕಾರಗಳನ್ನು ಹೊಂದಿರುವುದರಿಂದ ತಮ್ಮ-ತಮ್ಮ ರಾಜ್ಯದ ಹಿತಾಸಕ್ತಿಯ ಮೇರೆಯನ್ನು ದಾಟಿ ವಿವಾದಕ್ಕೆ ಪರಿಹಾರ ಕಂಡುಕೊಳ್ಳುವಲ್ಲಿ ಬೇಕಾದ ರಾಜಕೀಯ ಇಚ್ಛಾಶಕ್ತಿಯನ್ನು ಹೊಂದಿಲ್ಲದವುಗಳಾಗಿವೆ. ಪ್ರಾಧಿಕಾರದ ತೀರ್ಪುಬಂದಮೇಲೆ ಮುಂದಿನ ಕ್ರಮದ ಬಗ್ಗೆ ಎರಡೂ ರಾಜ್ಯಗಳ ಸರ್ಕಾರಗಳು ಬಹು ಎಚ್ಚರಿಕೆಯಿಂದ ಹೆಜ್ಜೆ ಇಡುತ್ತಿವೆ. ತಣ್ಣೀರನ್ನೂ ಆರಿಸಿ ಕುಡಿಯುತ್ತಿವೆ! ಕರ್ನಾಟಕವಂತೂ ಮೊದಲಿನಂತೆಯೇ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡಿದೆ. ಪ್ರಾಧಿಕಾರಕ್ಕೆ ಮರು ಪರಿಶಿಲನೆಯ ಅರ್ಜಿ ಸಲ್ಲಿಸಿದರೂ, ತೀರ್ಪು ಬರುವವರೆಗೆ ಈಗ ಬಂದಿರುವ ತೀರ್ಪಿನಂತೆ ತಮಿಳುನಾಡಿಗೆ ನೀರನ್ನು ಬಿಡಲೇ ಬೇಕು. ಸರ್ವೋಚ್ಚ ನ್ಯಾಯಾಲಯಕ್ಕೆ ಮೊರೆಹೋದರೂ ಇದೇ ಗತಿ. ಇದಕ್ಕೆ ಉದಾಹರಣೆ ನಮ್ಮ ಮುಂದೆ ಇದೆ. ರಾವಿ-ಬಿಯಾಸ್ ನದಿ ಹಂಚಿಕೆಗಾಗಿ ನೇಮಕಗೊಂಡಿರುವ ಎರಾಡಿ ನ್ಯಾಯ ಮಂಡಳಿಯ ಮುಂದೆ ವಿವಾದ ೨೦ ವರ್ಷಗಳಿಂದ ಇದೆ. ನ್ಯಾಯಾಧಿಕರಣಕ್ಕೆ ಮರು ಪರಿಶೀಲನಾ ಅರ್ಜಿ ಸಲ್ಲಿಸುವುದರಿಂದ, ಸುಪ್ರೀಂಕೋರ್ಟಿಗೆ ಮೊರೆ ಹೋಗುವುದರಿಂದ ಸಮಸ್ಯೆಯ ಅಂತಿಮ ಪರಿಹಾರವನ್ನು ಮುಂದಕ್ಕೆ ದೂಡಬಹುದೇ ಹೊರತು, ಈಗ ಬಂದಿರುವ ತೀರ್ಪನ್ನು ಜಾರಿಮಾಡದೆ ಕರ್ನಾಟಕಕ್ಕೆ ವಿಧಿ ಇಲ್ಲ. ಅಂದರೆ ಮರಣಶಿಕ್ಷೆಗೆ ಒಳಗಾದ ವ್ಯಕ್ತಿ ಕ್ಷಮಾದಾನ ಕೇಳಿ ರಾಷ್ಟ್ರಪತಿಯವರಿಗೆ ಅರ್ಜಿಸಲ್ಲಿಸಿ ನೇಣುಗಂಬಕ್ಕೆ ಹೋಗುವ ದಿನಗಳನ್ನು ಎಣಿಸುವಂಥ ಅಪರಾಧಿಯ ಸ್ಥಿತಿಯೇ ಕರ್ನಾಟಕದ್ದಾಗಿದೆ. ಕರ್ನಾಟಕದ ಬದಲಾಗಿ ತಮಿಳುನಾಡು ಈ ಕ್ರಮ ಕೈಗೊಂಡರೂ ಕರ್ನಾಟಕಕ್ಕೆ ಇದೇ ಪರಿಸ್ಥಿತಿ. ಈಗಾಗಲೇ ತಮಿಳುನಾಡು ಪ್ರಾಧಿಕಾರಕ್ಕೆ ಮರು ಅರ್ಜಿ ಸಲ್ಲಿಸಬೇಕೆಂದೂ ಮತ್ತು ಅಗತ್ಯವಾದರೆ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಬೇಕೆಂದೂ ತೀರ್ಮಾನಿಸಿದೆ. ದುರಂತವೆಂದರೆ ಪ್ರಾಧಿಕಾರದ ತೀರ್ಪು ಬಂದನಂತರದ ವಾಸ್ತವ ಸಂಗತಿಗಳನ್ನು ಕರ್ನಾಟಕ ಜನತೆ ಇನ್ನೂ ಅರಿಯದೆ ಪ್ರತಿಭಟನೆಯಂಥ ಅರ್ಥಹೀನ ಚಟುವಟಿಕೆಗಳಲ್ಲಿ ತೊಡಗಿ ತನ್ನ ಮೊದ್ದುತನವನ್ನು ಪ್ರಕಟಿಸುತ್ತಿರುವುದು.

ಇದುವರೆಗೆ ಪ್ರಾಧಿಕಾರದ ತೀರ್ಪನ್ನು ಕುರಿತು ಕರ್ನಾಟಕದ ಸರ್ಕಾರ, ನಿರಾವರಿ ತಜ್ಞರು, ಬುದ್ಧಿಜೀವಿಗಳು, ಸುದ್ದಿ ವಿಶ್ಲೇಷಕರು, ರಾಜಕಾರಣಿಗಳು, ಹೋರಾಟಗಾರರು, ಪತ್ರಿಕಾ ಸಂಪಾದಕೀಯಗಳು ಪ್ರಕಟಗೊಳಿಸಿರುವ ಅಭಿಪ್ರಾಯಗಳೆಲ್ಲವೂ ಅಡ್ಡಗೋಡೆಯ ಮೇಲೆ ದೀಪವನ್ನಿಟ್ಟಂತಿದೆ. ಅವರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಗೊಂದಲದ ಗೊಂಡಾರಣ್ಯವನ್ನು ಸೃಷ್ಟಿಸಿವೆ.

ನೈಜ ಪರಿಸ್ಥಿತಿ ಹೀಗಿರುವಾಗ ಕಾವೇರಿ ಜಲವಿವಾದಕ್ಕೆ ಶಾಶ್ವತ ಪರಿಹಾರ ಕೈಗೊಳ್ಳುವ ಬಗ್ಗೆ ಸಕಾರಾತ್ಮಕ, ರಚನಾತ್ಮಕ, ಸಂವಿಧಾನಾತ್ಮಕ, ಪ್ರಜಾತಾಂತ್ರಿಕ, ವೈಜ್ಞಾನಿಕ ಪ್ರಯತ್ನಗಳಲ್ಲದೆ ಬೇರೆ ಮಾರ್ಗ ಇಲ್ಲ ಎಂಬುದನ್ನು ಎರಡೂ ಸರ್ಕಾರಗಳೂ ಬೇಗ ಅರಿತಷ್ಟೂ ಕ್ಷೇಮ. ಈ ಮಾತು ಕರ್ನಾಟಕಕ್ಕೆ ಹೆಚ್ಚು ಅನ್ವಯಿಸುತ್ತದೆ. ಈಗ ವಿವಾದ ಎಂಥ ಘಟ್ಟ ಮುಟ್ಟಿದೆಯೆಂದರೆ ಕಾವೇರಿ ಕರ್ನಾಟಕದಲ್ಲಿ ಹೆಚ್ಚು ದೂರ ಹರಿಯುವುದರಿಂದ, ಕಾವೇರಿ ಜಲಾನಯನ ಪ್ರದೇಶದಲ್ಲಿ ಕರ್ನಾಟಕದ ನೀರಿನ ಪಾಲು ಹೆಚ್ಚು ಇರುವುದರಿಂದ ಕರ್ನಾಟಕಕ್ಕೇ ಕಾವೇರಿ ನೀರಿನ ಮೇಲೆ ಹೆಚ್ಚು ಅಧಿಕಾರವಿದೆ ಎಂಬ ಮಾತು ಬಾಲಿಶವೆನಿಸುತ್ತದೆ. ಈ ಮಾತನ್ನು ಕಾನೂನಿನ ಮೂಲಕವಾಗಲೀ, ಪ್ರಾಧಿಕರಣಗಳ ಮೂಲಕವಾಗಲೀ ಸಿದ್ಧಪಡಿಸಬೇಕಾದ ಕಾಲ ಮಿಂಚಿಹೋಗಿದೆ. ಈ ಸಂದರ್ಭದಲ್ಲಿ ಇನ್ನೊಂದು ನದಿ ನೀರಿನ ವಿವಾದದ ಹಣೆಬರಹವನ್ನು ನೆನಪಿಸಿಕೊಳ್ಳಬೇಕು. ಅದು ಕೃಷ್ಣಾ ನದಿ ನೀರಿನ ವಿವಾದಕ್ಕೆ ಸಂಬಂಧಿಸಿದ್ದು. ಈ ವಿವಾದಕ್ಕೆ ಸಂಬಂಧಿಸಿದ ಹಾಗೆ ಕೇಂದ್ರ ಸರ್ಕಾರ ನೇಮಿಸಿದ್ದ ಬಚಾವತ್ ನ್ಯಾಯ ಮಂಡಳಿಯ ಮುಂದೆ ಕರ್ನಾಟಕ ಸಲ್ಲಿಸಿದ್ದ ಮರು ವಿಚಾರಣೆ ಅರ್ಜಿಯ ಗತಿ ಏನಾಯಿತು? ಆ ನ್ಯಾಯ ಮಂಡಳಿಯ ಮುಂದೆ ಕರ್ನಾಟಕ ಮಂಡಿಸಿದ್ದ ಎಲ್ಲ ವಾದಗಳು ನೆಲಕಚ್ಚಿದವು. ಈಗ ಕರ್ನಾಟಕ ಕೃಷ್ಣೆಯ ಬಗ್ಗೆ ಕೈಕಟ್ಟಿ ಕುಳಿತುಕೊಳ್ಳುವ ಪರಿಸ್ಥಿತಿ ಉಂಟಾಗಿದೆ.

ಕಾವೇರಿ ನದಿ ನೀರಿನಲ್ಲಿ ಕರ್ನಾಟಕದ ಕಾಣಿಕೆ ಬಹಳ ಹೆಚ್ಚಾಗಿದೆ. ಆದ್ದರಿಂದ ಕರ್ನಾಟಕದ ರೈತರಿಗೆ ನ್ಯಾಯ ಸಮ್ಮತವಾದ ಪ್ರಮಾಣದಲ್ಲಿ ನೀರನ್ನು ಪಡೆಯುವ ಹಕ್ಕು ಎಂದಲ್ಲದಿದ್ದರೂ ಯೋಗ್ಯ ವ್ಯವಹಾರವೆಂದು ಜ್ಞಾನೋದಯ ತಮಿಳುನಾಡಿನ ಸರ್ಕಾರಕ್ಕೆ ಮತ್ತು ಮುಖ್ಯವಾಗಿ ಅಲ್ಲಿಯ ರೈತರಿಗೆ ಆಗುವಂಥ ಪರಿಸ್ಥಿತಿ ನಿರ್ಮಾಣಮಾಡುವ ಕೆಲಸ ತಮಿಳುನಾಡಿನಲ್ಲಿಯೂ, ಕರ್ನಾಟಕದಲ್ಲಿಯೂ ಆಗಬೇಕಾಗಿದೆ.

ಕಾವೇರಿ ನದಿ ನೀರಿನ ವಿವಾದದಲ್ಲಿ ನಮಗೆ ಮುಖ್ಯವಾಗಿ ಕಂಡುಬರುವ ಅಂಶಗಳೆಂದರೆ:-

೧. ತಮಿಳುನಾಡಿನ ಹಟಮಾರಿತನ
೨. ರಾಜಕೀಯವಾಗಿ ತಮಿಳುನಾಡು ಬಲಯುತವಾಗಿರುವುದು
೩. ಕರ್ನಾಟಕಸ್ಥರಲ್ಲಿರುವ ಮಾನವಿಯತೆ
೪. ರಾಜಕೀಯವಾಗಿ ಕರ್ನಾಟಕ ದುರ್ಬಲವಾಗಿರುವುದು
೫. ಎರಡೂ ರಾಜ್ಯಗಳ ರೈತರು ನೀರಿನ ಬಳಕೆಯಲ್ಲಿ ಜಾಣ್ಮೆಯನ್ನು ಪ್ರದರ್ಶಿಸದೇ ಇರುವುದು
೬. ನೀರು ಎಲ್ಲರ ಸೊತ್ತು ಎಂಬ ತಿಳುವಳಿಕೆ ಇಲ್ಲದಿರುವುದು.

೭. ಕಾವೇರಿ ನದಿ ನೀರಿನ ವಿವಾದವನ್ನು ರಾಜಕಾರಣಕ್ಕೆ ಬಳಸಿಕೊಂಡಿರುವುದು
೮. ಎರಡೂ ರಾಜ್ಯಗಳಲ್ಲಿಯ ಕೃಷಿ ವಿಶ್ವವಿದ್ಯಾನಿಲಯಗಳು ಕಡಿಮೆ ನೀರನ್ನು ಬಳಸಿ ವ್ಯವಸಾಯ ಮಾಡಬೇಕೆಂಬ ಅಂಶವನ್ನು ರೈತರಲ್ಲಿ ಸಮರೋಪಾದಿಯಲ್ಲಿ ಮೂಡಿಸದೇ ಇರುವುದು.
೯.ಕರ್ನಾಟಕದಲ್ಲಿರುವ ಕಾವೇರಿ ಜಲಾನಯನ ಪ್ರದೇಶದಲ್ಲಿಯ ನಿರಾವರಿ ಯೋಜನೆಗಳನ್ನು ಪೂರ್ತಿಗೊಳಿಸುವುದರಿಂದ ಪರೋಕ್ಷವಾಗಿ ತಮಿಳುನಾಡಿಗೂ, ಪ್ರತ್ಯಕ್ಷವಾಗಿ ಕರ್ನಾಟಕಕ್ಕೂ ಪ್ರಯೋಜನವಾಗುವುದೆಂಬ ತಾಂತ್ರಿಕ ತಿಳುವಳಿಕೆಯನ್ನು ಕರ್ನಾಟಕದ ತಜ್ಞರು ತಮಿಳುನಾಡಿನ ತಜ್ಞರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿಲ್ಲದಿರುವುದು.
೧೦. ಕೆ.ಆರ್.ಎಸ್. ಮತ್ತಿತರ ಅಣೆಕಟ್ಟುಗಳಲ್ಲಿ ಶೇಖರಗೊಂಡಿರುವ ಅಪಾರ ಪ್ರಮಾಣದ ಹೂಳನ್ನೆತ್ತಲು ತಮಿಳುನಾಡು ಸಹಕರಿಸಿದರೆ ತನಗೂ ಅದರಿಂದ ಪ್ರಯೋಜನವಾಗುವುದೆಂಬ ಸಾಮಾನ್ಯ ತಿಳುವಳಿಕೆಯೂ ತಮಿಳುನಾಡಿನ ತಜ್ಞರಿಗೆ ಬರದೇ ಇರುವುದು.
೧೧. ಮೇಕೆದಾಟು ಬಳಿ ಕಟ್ಟೆ ಕಟ್ಟುವುದರ ಮೂಲಕ ಉಭಯ ರಾಜ್ಯಗಳೂ ಪ್ರಯೋಜನ ಪಡೆಯಬಹುದು. ಅಲ್ಲದೆ, ಎರಡೂ ರಾಜ್ಯಗಳು ಎದುರಿಸುತ್ತಿರುವ ನೀರಿನ ಸಮಸ್ಯೆಯು ಶೇಕಡಾ ೮೦ ರಷ್ಟು ಬಗೆಹರಿಯುವುದು. ಈ ಕೆಲಸವನ್ನೇಕೆ ತಮಿಳುನಾಡುಮಾಡುತ್ತಿಲ್ಲ.? ಈ ಕಟ್ಟೆ ಕಟ್ಟುವುದರಿಂದ ತನ್ನ ರಾಜ್ಯದ ಫಲವತ್ತಾದ ಭೂಮಿ ಮುಳುಗಡೆಯಾಗುವುದೆಂದೇ? ನಿರ್ಮಾಣಕ್ಕೆ ಬಹಳ ಹಣ ಬೇಕಾಗುತ್ತದಯೆಂದೇ?, ಪುನರ್ವಸತಿ ಕಷ್ಟದಾಯಕ ಕೆಲಸವೆಂದೇ? ಇಂಥ ಶಾಶ್ವತ ಕೆಲಸವನ್ನು ಮಾಡುವುದನ್ನು ಬಿಟ್ಟು ಕರ್ನಾಟಕದೊಂದಿಗೆ ನೂರು ವರ್ಷಗಳ ಹೋರಾಟ ಸಾಲದೆಂಬಂತೆ ತಮಿಳುನಾಡಿನ ಮುಖಂಡರು ವರ್ತಿಸುತ್ತಿರುವುದು.
೧೨. ತಂಜಾವೂರು ಜಿಲ್ಲೆಯಲ್ಲಿ ಕಾವೇರಿ ನದಿ ನೀರನ್ನು ಪೋಲುಮಾಡುತ್ತಾ, ಸಮುದ್ರಕ್ಕೆ ಬಿಡುವುದರಲ್ಲಿ ತಮಿಳುನಾಡು ಯಾವ ಪುರುಷಾರ್ಥವನ್ನು ಕಾಣುತ್ತಿದೆ ಎಂಬುದು.
೧೩. ನ್ಯಾಯಾಧಿಕರಣದ ತೀರ್ಪು ರಾಜಕೀಯ ಪ್ರಭಾವಕ್ಕೊಳಗಾಗಿರುವುದು.
೧೪. ರಾಜಕಾರಣದ ಒತ್ತಡದಿಂದಾಗಿ ಕೇಂದ್ರ ಸರ್ಕಾರ ನ್ಯಾಯಾಧಿಕರಣ, ಸರ್ವೋಚ್ಚನ್ಯಾಯಾಲಯದ ಕಡೆಗೆ ಬೆಟ್ಟುಮಾಡಿ ತೋರಿಸುತ್ತಿರುವುದು.
೧೫. ಕರ್ನಾಟಕ ರಾಜ್ಯದಲ್ಲಿಯ ಅಂತರ್ಜಲದ ಲೆಕ್ಕವನ್ನು ಗಮನಕ್ಕೆ ತೆಗೆದುಕೊಂಡು ಪ್ರಾಧಿಕಾರ ಅದೇ ತಮಿಳುನಾಡಿನಲ್ಲಿಯ ಅಂತರ್ಜಲದ ಲೆಕ್ಕವನ್ನು ಗಣನೆಗೆ ತೆಗೆದುಕೊಳ್ಳದೆ ನ್ಯಾಯುದ ತಕ್ಕಡಿಯನ್ನು ನ್ಯಾಯಾಧಿಕರಣ ಸರಿಯಾಗಿ ಹಿಡಿಯದೇ ಇರುವುದು.

೧೬. ಈಗ ಬಂದಿರುವ ತೀರ್ಪಿನಿಂದ ವ್ಯವಸಾಯಕ್ಕಷ್ಟೇ ನೀರಿನ ಕೊರತೆಯಾಗದೆ ಬೆಂಗಳೂರು ಮತ್ತು ಮತ್ತಿತರ ನಗರಗಳಿಗೆ ಕುಡಿಯುವ ನೀರಿನ ಕೊರತೆಯಾಗುತ್ತದೆಂಬುದನ್ನು ನ್ಯಾಯಾಧಿಕರಣ ಗಮನಕ್ಕೆ ತೆಗೆದುಕೊಳ್ಳದೇ ಇರುವುದು.

೧೭. ನ್ಯಾಯಮಂಡಳಿಯ ತೀರ್ಪು ತಾರತಮ್ಯತೆಯಿಂದ ಕೂಡಿದೆ ಎಂಬುದಕ್ಕೆ ಒಂದು ಸ್ಪಷ್ಟ ಉದಾಹರಣೆ ಏನೆಂದರೆ, ಒಂದು ಟಿ.ಎಂ.ಸಿ ನೀರಿನ ಲಭ್ಯತೆಯಿಂದ ಕರ್ನಾಟಕ ಹತ್ತುಸಾವಿರ ಎಕರೆಗಳಿಗೆ ನೀರು ಉಪಯೋಗಿಸಬೇಕಂತೆ. ಅದೇ ತಮಿಳುನಾಡು ಐದು ಸಾವಿರ ಎಕರೆಗೆ ಉಪಯೋಗಿಸಿ ಹೆಚ್ಚು ಬೆಳೆಯನ್ನು ಬೆಳೆಯಬಹುದಂತೆ!

೧೮. ತಮಿಳುನಾಡು ಕಾವೇರಿ ನೀರಿನ ವಿಷಯದಲ್ಲಿ ೧೯೨೪ರಿಂದಲೂ ಒಂದು ಪ್ರಕಾರದ ಬ್ಲ್ಯಾಕ್‌ಮೇಲ್ ತಂತ್ರವನ್ನು ಅನುಸರಿಸುತ್ತಾ ಬಂದಿರುವುದು.

ಮೇಲ್ಕಾಣಿಸಿದಂಥ ಇನ್ನೂ ನೂರಾರು ಅಂಶಗಳು ನ್ಯಾಯಾಧಿಕರಣದ ಇತ್ತೀಚಿಗಿನ ತೀರ್ಪಿನಲ್ಲಿ ಕಾಣಬರುತ್ತವೆ. ಒಂದು ಸಾವಿರ ಪುಟದ ತೀರ್ಪಿನ ಒಂದೊಂದು ವಾಕ್ಯದಲ್ಲೂ ಕರ್ನಾಟಕಕ್ಕೆ ಪ್ರತಿಕೂಲವಾದ ಮಾತುಗಳಿವೆ.

ಈಗ ಕಾವೇರಿ ವಿವಾದ ಪುನಃ ನ್ಯಾಯಾಧಿಕರಣ ಮತ್ತು ಸರ್ವೋಚ್ಛನ್ಯಾಯಾಲಯದ ಕಟ್ಟೆ ಹತ್ತಿ ಅನಿರ್ದಿಷ್ಟ ಕಾಲ ಕೋರ್ಟಿನ ಕಟೆಕಟೆಯೊಳಗೆ ಸೇರಲಿದೆ. ಅಲ್ಲದೆ, ಲೋಕಸಭೆಯಲ್ಲೂ ಬಿರುಗಾಳಿ ಎಬ್ಬಿಸಲಿದೆ. ಕರ್ನಾಟಕ ಲೋಕಸಭೆಯಲ್ಲಿ ನಿಲುವಳಿ ಸೂಚನೆಯ ಮೂಲಕ ಕಾವೇರಿ ವಿಷಯವನ್ನು ಚರ್ಚೆಗೆ ತರುವ ಕರ್ನಾಟಕದ ಪ್ರಯತ್ನಕ್ಕೆ ಎದುರಾಗಿ ತಮಿಳುನಾಡು ಸಹ ತನ್ನ ಸಿದ್ಧತೆ ಮಾಡುತ್ತಿದೆ.

ಕಾವೇರಿ ವಿವಾದ ತಾರಕಕ್ಕೆ ಏರುತ್ತಿರುವಾಗ ಕರ್ನಾಟಕ ಕಾವೇರಿ ಸುಳಿಯಲ್ಲಿ ಸಿಕ್ಕಿಹಾಕಿ ಕೊಂಡಿರುವಂತೆಯೇ ಪರಿಹಾರವೂ ಗೊಂದಲದ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿದೆ.

ಪರಿಹಾರದ ಪ್ರಯತ್ನವಾಗಿ ಕರ್ನಾಟಕದ ಮುಂದೆಯಿರುವ ಮಾರ್ಗಗಳು ಇಂತಿವೆ:–

೧. ನ್ಯಾಯಾಧಿಕರಣಕ್ಕೇ ವಿವಾದದ ಮರುಪರಿಶೀಲನಗೆ ಅರ್ಜಿ ಸಲ್ಲಿಸುವುದು.

೨. ನ್ಯಾಯಾಧಿಕರಣದ ತೀರ್ಪಿನ ವಿರುದ್ಧ ಸರ್ವೋಚ್ಛನ್ಯಾಯಾಲಯಕ್ಕೆ ಮೊರೆಹೋಗುವುದು.

೩. ಕರುಣಾನಿಧಿಯವರು ಹೇಳಿದಂತೆ ಮಾತುಕತೆಯ ಮೂಲಕ ವಿವಾದವನ್ನು ಬಗೆಹರಿಸಿಕೊಳ್ಳುವುದು, ಈ ಸಲಹೆಯನ್ನು ಕರ್ನಾಟಕ ರೈತ ಸಂಘಟನೆಯ ಮುಖಂಡರಾದ ಪುಟ್ಟಣ್ಣಯ್ಯನವರೂ ಸ್ವಾಗತಿಸಿದ್ದಾರೆ.

೪. ಹೊಸ ನ್ಯಾಯಾಧಿಕರಣವನ್ನು ಸ್ಥಾಪಿಸುವಂತೆ ಕೇಂದ್ರದ ಮೇಲೆ ಒತ್ತಡ ತರುವುದು. ಆದರೆ ಇದು ಕಷ್ಟಸಾಧ್ಯ.

೫. ಕಾವೇರಿಯಲ್ಲಿ ನೀರು ಕಡಿಮೆಯಿದ್ದಾಗ ಅಂದರೆ ಸಂಕಷ್ಟದಲ್ಲಿ ನಿರಿನ ಹಂಚಿಕೆ ಹೇಗಾಗಬೇಕು ಎಂಬುದರ ಬಗ್ಗೆ ಎರಡು ರಾಜ್ಯಗಳು ತಜ್ಞರೊಂದಿಗೆ ಹಾಗೂ ರೈತ ಮುಖಂಡರೊಂದಿಗೆ ಕುಳಿತು ಮಾತನಾಡಿದರೆ ಕೆಲವು ಪರಿಹಾರಗಳು ದೊರೆಯುವ ಸಾಧ್ಯತೆ ಇದೆ. ಈ ನಿಟ್ಟಿನಲ್ಲಿ ಗಂಭೀರವಾಗಿ ಪ್ರಯತ್ನ ನಡೆಯಬೇಕು.

ಕಾವೇರಿ ನದಿ ನೀರಿನ ಉಪಯೋಗದ ವಿವಾದವು ಸಧ್ಯಕ್ಕೆ ಮುಗಿಯುವ ಯಾವ ಸೂಚನೆಯೂ ಕಾಣುತ್ತಿಲ್ಲ. ಬದಲಿಗೆ ವಿಷಮಗೊಳ್ಳುವ ಸಂದರ್ಭವೇ ಹೆಚ್ಚಾಗುತ್ತಿವೆ. ಇದರಿಂದಾಗಿ ತಮಿಳುನಾಡಿನ ರೈತರಿಗಿಂತ ಕರ್ನಾಟಕದ ರೈತರು ವ್ಯವಸಾಯಕ್ಕೆ ಬೇಕಾದ ನೀರಿನಿಂದ ವಂಚಿತರಾಗಿಯೆ ಉಳಿದುಕೊಳ್ಳಬೇಕಾಗುತ್ತದೆ. ನೀರು ಅಂದರೆ ಜೀವನ ಎಂದರ್ಥ. ನೀರಿಲ್ಲದೆ ನಮ್ಮ ರಾಜ್ಯದ ಅಭಿವೃದ್ಧಿ ಕುಂಠಿತಗೊಳ್ಳುವುದು. ಯಾವ ದೃಷ್ಟಿಕೋನದಿಂದ ನೋಡಿದರೂ ಕರ್ನಾಟಕಕ್ಕೆ ಮುಕ್ತಿ ದೊರೆಯುವ ಲಕ್ಷಣ ಕಾಣುತ್ತಿಲ್ಲ. ಆದ್ದರಿಂದ ಪರಿಹಾರಕ್ಕೆ ಇರುವ ಏಕೈಕ ಮತ್ತು ಸಾಧ್ಯವಾಗಬಹದಾದ ಪರಿಹಾರವೇನೆಂದರೆ ಎರಡೂ ರಾಜ್ಯದ ರೈತಮುಖಂಡರು ಹಲವಾರು ಬಾರಿ ಚಕ್ರಗೋಷ್ಠಿ ನಡೆಸಿ ಪರಸ್ಪರರ ಹಿತಕ್ಕನುಗುಣವಾದ ರಾಜೀ ಸೂತ್ರವನ್ನು ಕಂಡು ಹಿಡಿಯುವುದೇ ಆಗಿದೆ. ಈಗಾಗಲೆ ಎರಡೂ ರಾಜ್ಯಗಳ ರೈತರು ಒಂದುಗೂಡಿ ಮಿತ್ರಕೂಟವನ್ನು ರಚಿಸಿ ಈ ಸಮಸ್ಯೆಯ ಪರಹಾರಕ್ಕೆ ಪ್ರಯತ್ನಿಸುತ್ತಿದ್ದಾರೆ ಈ ಸ್ನೇಹ ಕೂಟದ ಸಭೆ ಈಗಾಗಲೆ ಹಲವಾರು ಬಾರಿ ಸಭೆ ಸೇರಿ ವಿಚಾರ ವಿನಿಮಯ ಮಾಡಿದೆ. ಇಂದಿನ ವಿಕೋಪಕರ ಪರಿಸ್ಥಿತಿಯಲ್ಲಿ ರೈತರ ಈ ಸ್ನೇಹಕೂಟವು ಹೆಚ್ಚು ಕ್ರಿಯಾಶೀಲವಾಗಬೇಕು. ಎರಡೂ ರಾಜ್ಯದ ಸರ್ಕಾರಗಳು ಈ ಸ್ನೇಹಕೂಟಕ್ಕೆ ತಮ್ಮ ನೈತಿಕ ಬೆಂಬಲ ಕೊಡುವುದರ ಜೊತೆಗೆ ಎಲ್ಲ ಸಹಾಯ ಸೌಲಭ್ಯಗಳನ್ನೂ ಒದಗಿಸಬೇಕು. ಇದೇ ತಮಿಳುನಾಡು ಮತ್ತು ಕರ್ನಾಟಕದ ರೈತ ಸಮುದಾಯದ ಏಳಿಗೆಯ ಮಾರ್ಗವಾಗಬಲ್ಲದು. ಇದು ವಿಫಲವಾದರೆ ರೈತರು ಸರ್ವನಾಶವಾಗುವುದರಲ್ಲಿ ಸಂದೇಹವಿಲ್ಲ. ತಮಿಳುನಾಡಿನ ಜನಕ್ಕೆ ಮತ್ತು ಸರ್ಕಾರಕ್ಕೆ ಕರ್ನಾಟಕದ ನೋವು ಅರ್ಥವಾಗುವಂಥ ರೀತಿಯಲ್ಲಿ ಸತ್ಯಾಗ್ರಹವನ್ನು ನಿಜಾರ್ಥದಲ್ಲಿ ರಾಜ್ಯದಾದ್ಯಂತ ನಡೆಸಬೇಕು.

****

ಕರ್ನಾಟಕದ ವರ್ತಮಾನ ಪರಿಸ್ಥಿತಿ ಕುರಿತಾದ ಒಂದು ಚಿಂತನೆ.

-ಪ್ರೋ.ಕೆ.ಎಸ್.ನಿಸಾರ್‌ಅಹಮದ್.

[೨೦೦೬ ಡಿಸೆಂಬರ್ ೨೧,೨೨,೨೩ ಈ ದಿನಾಂಕಗಳಲ್ಲಿ ಶಿವಮೊಗ್ಗೆಯಲ್ಲಿ ನಡೆದ ೭೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷ ಭಾಷಣದ ಸಂಕ್ಷಿಪ್ತ ಪಾಠ]

ಕನ್ನಡ ನನ್ನ ಕಲಿಕೆಯ ಭಾಷೆ, ಉರ್ದು ಮನೆ ಮಾತು. ನಾನು ಕಸ್ತೂರಿ ಕನ್ನಡವನ್ನು ಮೊದಲಿನಿಂದ ಪ್ರೀತಿಸುತ್ತಾ, ಗೌರವಿಸುತ್ತಾ ಬಂದವನು. ಈ ಭಾಷೆಗೆ ವಾಸ್ತವ ಬದುಕಿನ ವ್ಯವಹಾರಗಳನ್ನು ಹೇಗೋ ಹಾಗೆ ಭಾವಲೋಕದ ಅಪೂರ್ವಾನುಭವಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸುವ ಶಕ್ತಿ ಇದೆ, ಪದ ಸಮೃದ್ಧಿ ಇದೆ ಹಾಗೂ ಬಹು ಕಾಲದ ಬಳಕೆಯಿಂದ ಆರ್ಜಿಸಿಕೊಂಡ ವೈವಿಧ್ಯಮಯ ನುಡಿಗಟ್ಟಿನ ಸಿದ್ಧಿ ಇದೆ. ಏಕೀಕರಣವಾದ ಮೇಲಾದರೂ ಇದು ನಮ್ಮ ಶಿಕ್ಷಣದ, ನ್ಯಾಯಾಂಗದ, ಆಡಳಿತದ ಭಾಷೆಯಾಗಿ ಮೆರೆಯಬೇಕಾಗಿತ್ತು. ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ, ನಮ್ಮ ನಾಡಿನ ಮಹಾಜನರ ಔದಾಸೀನ್ಯಪೂರ್ವಕ ಅಭಿಮಾನ ಶೂನ್ಯತೆಯ ದೆಸೆಯಿಂದ ಅದು ಇನ್ನೂ ಇಂಗ್ಲೀಷಿನ ಧಣಿತನದಲ್ಲಿ ತಲೆ ಎತ್ತಿ, ಮೆರೆಯದೆ ಸೊರಗುತ್ತಿದೆ. ಎಲ್ಲಿಯ ತನಕ ನಮ್ಮ ಜನಪದದ ಆಡುಮಾತಿನ ಮತ್ತು ದೈನಿಕ ವಹಿವಾಟುಗಳ ಭಾಷೆ ರಾಜ್ಯದ ವ್ಯವಹಾರಮಾನ್ಯ ಭಾಷೆಯಾಗುವುದಿಲ್ಲವೋ ಅಲ್ಲಿಯತನಕ ನಾವು ಸರ್ವಸ್ವತಂತ್ರರಾದೆವೆಂದು ಘೋಷಿಸಿಕೊಳ್ಳುವುದು ಗಾಂಪತನವಾದೀತು. ನಮ್ಮನ್ನು ಆಳುವ ಮಂದಿಯಲ್ಲಿ ಕೆಲವರಲ್ಲಾದರೂ ಇನ್ನೂ ಕನ್ನಡ ಪರವಾದ ಒಲವಿನ ಕಿಡಿ ಜೀವಂತವಾಗಿದೆ. ಇದನ್ನು ಸದಭಿಮಾನದ ಊದುಗೊಳುವೆಯಿಂದ ಉರುಬಿ ಕೆಂಡಮಾಡಿಕೊಂಡಾಗ, ಬಹುಶಃ ನಮ್ಮ ಜನ ಅದರ ಕಾವು ಮತ್ತು ದೀಪ್ತಿಗಳಿಂದ ಪ್ರಯೋಜನ ಪಡೆದಾರು. ನಮ್ಮ ಹಿರಿಯ ಅಧಿಕಾರಿಗಳು ಈ ನಿಟ್ಟಿನಲ್ಲಿ ಈಗಲಾದರೂ ತಮ್ಮ ಮನಸ್ಸನ್ನು ಹಾಯಿಸಬೇಕು. ಕೇವಲ ಕನ್ನಡ ಪರವಾದ ಆದೇಶಗಳನ್ನು ಪುಂಖಾನುಪುಂಖವಾಗಿ ಬಿಡುಗಡೆ ಮಾಡಿದರೆ ಸಾಲದು, ಕಟ್ಟುನಿಟ್ಟಾಗಿ ಕಾರ್ಯಶೀಲರಾಗಬೇಕು. ಆದರೆ ಯಾಕೋ ಇನ್ನೂ ಇಂತಹ ಸಂಕಲ್ಪ ಮಾಡಿಲ್ಲ.

ಕರ್ನಾಟಕದ ಹೆಮ್ಮೆಯ ರಾಜಧಾನಿ ಎನ್ನಿಸಿರುವ ಬೆಂಗಳೂರು ಮಹಾನಗರದಲ್ಲಿ ಕನ್ನಡಿಗರ, ಕನ್ನಡದ ಸ್ಥಿತಿಗತಿಯಂತೂ ಮತ್ತೂ ಕರುಣಾಜನಕ. ಮಾಹಿತಿ ತಂತ್ರಜ್ಞಾನದ ದೆಸೆಯಿಂದ, ಇತರೇ ಉದ್ಯಮಗಳ ವಹಿವಾಟುಗಳ ಕಾರಣದಿಂದ, ವ್ಯಾಪಾರದ ಹತೋಟಿ

ಮೀರಿದ ಹೆಚ್ಚಳದ ನಿಮಿತ್ತದಿಂದ ಪರ ಭಾಷಿಕರು ತಡೆಯಿಲ್ಲದೆ ನಮ್ಮ ರಾಜಧಾನಿಯಲ್ಲಿ ಬೇರುಗಳನ್ನು ಹರಡಿ ಬಲಗೊಳ್ಳುತ್ತಿದ್ದಾರೆ. ಹಲವು ವರ್ಷಗಳ ಕಾಲದಿಂದ ಇಲ್ಲಿ ಬಾಳುತ್ತಿದ್ದವರೂ ನಮ್ಮ ಭಾಷೆಯನ್ನು ಆಡುವ, ಕಲಿಯುವ ಗೋಜಿಗೆ ಹೋಗದಿರುವುದಕ್ಕೆ ನಮ್ಮ ಕನ್ನಡಿಗರ ಅನಪೇಕ್ಷಿತ ಔದಾರ್ಯ, ಮೃದು ಧೋರಣೆಯೇ ಕಾರಣ. ಸ್ವತಃ ನಮ್ಮವರಲ್ಲೇ ಹಲವರು ಅದರಲ್ಲೂ ಸಾಮಾಜಿಕವಾಗಿ ಮೇಲ್ಮಟ್ಟದಲ್ಲಿರುವವರು, ಕನ್ನಡದ ಬಗ್ಗೆ ತಳೆದಿರುವ ತಾತ್ಸಾರ ಮತ್ತು ನಿರಭಿಮಾನ ನಾಚಿಕೆಗೇಡಿನದಾಗಿದೆ. ಕನ್ನಡಿಗರ ಸಂಖ್ಯೆ ಇಳಿಮುಖವಾಗುತ್ತಿರುವುದು ಮತ್ತು ಇಲ್ಲಿನ ಖಾಸಗಿ ಹಾಗೂ ಕೇಂದ್ರ ಸರ್ಕಾರದ ಅಧೀನದ ಉದ್ಯಮ ಸಂಸ್ಥೆಗಳಲ್ಲಿ, ಕಾರ್ಖಾನೆಗಳಲ್ಲಿ ಮತ್ತು ವಿವಿಧ ವ್ಯಾಪಾರಗಳ ಕ್ಷೇತ್ರದಲ್ಲಿ ಕನ್ನಡಿಗರಿಗೆ ಉದ್ಯೋಗದ ಮಾನ್ಯತೆ ಇಲ್ಲದಿರುವುದು ಮುಂದಿನ ಕರಾಳ ಭವಿಷ್ಯಕ್ಕೆ ಕೈ ಮರವಾಗಿದೆ. ಇನ್ನಾದರೂ ಎಚ್ಚೆತ್ತುಕೊಳ್ಳದಿದ್ದರೆ ಮುಂದೆ ಕನ್ನಡಿಗರು ಅನುಭವಿಸಬೇಕಾದ ಕಷ್ಟ ನಷ್ಟಗಳನ್ನು, ಸೋಲು ಅವಮಾನಗಳನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ.

ಶಿಕ್ಷಣ ಸಂಸ್ಥೆಗಳ ವಿಷಯಕ್ಕೆ ಬಂದಾಗ ಏನನ್ನು ಹೇಳಿದರೂ ಪುನರುಕ್ತಿ ಎನ್ನಿಸುತ್ತದೆ. ಕಾನ್ವೆಂಟುಗಳ ನಿರಂಕುಶ ಹೆಚ್ಚಳಕ್ಕೆ ಜನಗಳಲ್ಲಿ ಇಂಗ್ಲೀಷಿನ ಬಗ್ಗೆ ಬೆಳೆಸಿಕೊಂಡ ವ್ಯವಹಾರಮಾನ್ಯ ವ್ಯಾಮೋಹದ ಜೊತೆಗೆ, ನಮ್ಮ ಸರ್ಕಾರದ ಧೋರಣೆಯೂ ಅಸಮಾಧಾನಕರವಾಗಿದೆ. ಒಂದು ಕಡೆ ಅನಧಿಕೃತ ಶಾಲೆಗಳನ್ನು ಪಟ್ಟಿ ಮಾಡಿ ಮುಚ್ಚುವುದಾಗಿ ಬೆದರಿಸುತ್ತ, ಮತ್ತೊಂದು ಕಡೆ ಮುಂದಿನ ವರ್ಷದವರೆಗೂ ರಿಯಾಯಿತಿಯನ್ನು ನೀಡುವ ನಾಟಕವಾಡುತ್ತ, ಶೈಕ್ಷಣಿಕ ಕ್ಷೇತ್ರದ ಪಟ್ಟಭದ್ರರು ನ್ಯಾಯಾಲಯದ ಮೆಟ್ಟಿಲನ್ನು ಏರಿ ಬಚಾವಾಗುವ ವಿಧಾನಗಳನ್ನು ಹುಡುಕಿಕೊಳ್ಳಲು ಅವಕಾಶ ಮಾಡಿಕೊಡುತ್ತ ಹೊಣೆಗಾರಿಕೆಯಿಂದ ಜಾರಿಕೊಳ್ಳುವುದು ಅತ್ಯಂತ ಖಂಡನೀಯ. ಇಷ್ಟೇ ಅಲ್ಲದೆ, ಆಂಗ್ಲ ಶಾಲೆಗಳಲ್ಲಿ ಕನ್ನಡವನ್ನು ಕಲಿಸುತ್ತೇವೆ ಎಂದು ಮುಚ್ಚಳಿಕೆಯನ್ನು ಬರೆದು ಕೊಟ್ಟು ವಿಶೇಷ ಸವಲತ್ತುಗಳನ್ನು ದಕ್ಕಿಸಿಕೊಳ್ಳುತ್ತ ಇಂಗ್ಲೀಷನ್ನು ಪ್ರಚ್ಛನ್ನವಾಗಿ ಬಲಿಷ್ಠಗೊಳಿಸುತ್ತಿರುವ ಆಷಾಢಭೂತಿಗಳ ಕುತ್ಸಿತ ಕುಯುಕ್ತಿಯ ಬಗ್ಗೆ ತಿಳಿದಿದ್ದರೂ ಸರ್ಕಾರ ಸಂಬಂಧಿಸಿದವರನ್ನು ದಂಡಿಸದೆ ಇರುವ ಪರಿಯನ್ನು ಗಮನಿಸಿದಾಗ ಕನ್ನಡಿಗರಿಗೆ ಸರ್ಕಾರದ ನಿರ್ಲಕ್ಷ್ಯ ಮತ್ತು ಸಡಿಲ ನೀತಿ ಜಿಗುಪ್ಸೆಯನ್ನು ಹುಟ್ಟಿಸುತ್ತದೆ. ಇನ್ನು ಮೇಲಾದರೂ ನಮ್ಮ ನಾಯಕರು ಸಂಬಂಧಪಟ್ಟ ಆಡಳಿತಾಧಿಕಾರಿಗಳು ಕನ್ನಡಕ್ಕೆ ನ್ಯಾಯ ದೊರೆಕಿಸಿಕೊಡುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುವರೆಂದು ಆಶಿಸೋಣ.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನವನ್ನು ಪಡೆಯುವ ಬಗ್ಗೆಯೂ ನಮ್ಮ ಸಂಸದರ ಮತ್ತು ಇಲ್ಲಿನ ರಾಜಕೀಯ ಧುರೀಣರ ನಿರಾಸಕ್ತಿ, ಅಲಸ ಧೋರಣೆ ಬೇಸರ ಹುಟ್ಟಿಸುತ್ತದೆ. ಕೇಂದ್ರದಲ್ಲಿರಲಿ, ಉತ್ತರ ಭಾರತದ ಇತರ ರಾಜ್ಯಗಳಲ್ಲಿ ನಮ್ಮ ಮುಂದಾಳುಗಳ ಬಗೆಗಾಗಲಿ, ನಮ್ಮ ನಾಡಿನ ಬಗೆಗಾಗಲಿ ಇರುವ ತಾತ್ಸಾರದ ಮನೋಭಾವ ನಿಜಕ್ಕೂ ವಿಷಾದನೀಯ. ನೆರೆ ರಾಜ್ಯ ತನಗೆ ನಿಗದಿತವಾದ ಅನುದಾನಕ್ಕಿಂತ ಹಲವು ಪಟ್ಟನಷ್ಟು ಸದ್ದಿಲ್ಲದೆ

ಲಪಟಾಯಿಸುತ್ತಿರುವಾಗ, ನಮ್ಮವರು ಅಗತ್ಯಕ್ಕಿಂತ ಕಡಿಮೆಯಷ್ಟನ್ನಾದರೂ ಮಂಜೂರು ಮಾಡಿಸಿ ತರುವುದರಲ್ಲಿ ವಿಫಲರಾಗುತ್ತಿರುವುದಂತೂ ಲಜ್ಜಾಸ್ಪದ ಸಂಗತಿ. ರಾಜ್ಯ, ಭಾಷೆ, ಸಂಸ್ಕೃತಿಗಳ ಹಿತ ಕಾಪಾಡುವುದರಲ್ಲಿ ನಮ್ಮ ಸಂಸದರಲ್ಲಿ ಒಗ್ಗಟ್ಟಿಲ್ಲದಿರುವುದು, ಪಕ್ಷದ ನಿಷ್ಠೆಯೇ ಎಲ್ಲಕ್ಕಿಂತ ಪರಮವೆಂದು ತಿಳಿದಿರುವುದು, ರಾಷ್ಟ್ರೀಯ ನಾಯಕರೆದುರು ಅದಬ್ಬಿನಿಂದ ವರ್ತಿಸುತ್ತಾ ಅವರ ಮುಖೋಲ್ಲಾಸ ಮಾಡುವುದು ಪುರುಷಾರ್ಥವೆಂದು ಭಾವಿಸಿರುವುದು, ನಮ್ಮ ನಾಡು ನುಡಿಯ ಹಿತಕ್ಕೆ ಅನೇಕ ದಶಕಗಳಿಂದ ಎಂತಹ ವಂಚನೆಯನ್ನು ಎಸಗಿದೆ ಎನ್ನುವುದನ್ನು ಹಿಂದಿನ ದಿನ ಪತ್ರಿಕೆಗಳ ಪುಟಗಳನ್ನು ತಿರುವಿ ಹಾಕಿದರೆ ಮನವರಿಕೆಯಾದೀತು.

ಹೆಚ್ಚು ಕಡಿಮೆ ತಮಿಳಿನಷ್ಟೇ ನಮ್ಮ ಸಿರಿಗನ್ನಡವೂ ಪ್ರಾಚೀನ, ಸ್ವಾಭಾವಿಕವಾಗಿ ಶಾಸ್ತ್ರೀಯ ಸ್ಥಾನಮಾನದ ಮಕುಟ ನಮ್ಮ ತಾಯ್ನುಡಿಯ ಮುಡಿಯ ಮೇಲೆ ವಿರಾಜಿಸಬೇಕಾದದ್ದು ನ್ಯಾಯಯುತವೇ. ಈಚೆಗೆ ಅದರ ಸದ್ದನ್ನು ಅಡಗಿಸುವ ತಂತ್ರ ಸಹ ನಡೆದಿರುವುದು ದೌರ್ಭಾಗ್ಯ. ಇದರ ಬಗ್ಗೆ ಜನ ಬೆಂಬಲ ಅನಿವಾರ್ಯ. ಒತ್ತಡವಿಲ್ಲದೆ ರಾಜಕೀಯವಾಗಿ ಯಾವ ಕೆಲಸವೂ ಕೈಗೂಡದು. ಆದ್ದರಿಂದ ಕನ್ನಡಿಗರೆಲ್ಲರೂ ಒಟ್ಟಾಗಿ ಕೂಡಿ ನಮ್ಮ ತಾಯಿಯನ್ನು ಗೌರವಾದರಗಳಿಂದ ಉತ್ಸವಿಸುವ ಕೈಂಕರ್ಯದಲ್ಲಿ ಪಾಲ್ಗೊಳ್ಳಬೇಕಾಗಿದೆ.

ಮೊದಲೇ ಸೂಚಿಸಿದಂತೆ ಬೆಂಗಳೂರು, ಮೈಸೂರು ಮುಂತಾದ ನಗರಗಳಲ್ಲಿ ಅನ್ಯ ಭಾಷಿಕ ಹಣ ಹದ್ದುಗಳ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಾಗಲಿ, ವಿವಿಧ ಉದ್ಯಮ ಸಂಸ್ಥೆಗಳಲ್ಲಾಗಲಿ, ಮಾಹಿತಿ ತಂತ್ರಜ್ಞಾನದ ಅಮರಾವತಿ ಸದೃಶ ಬೃಹತ್ ಸಂಕೀರ್ಣಗಳಲ್ಲಿ ಆಗಲಿ ನಮ್ಮ ಜನರಿಗೆ ಲಭಿಸಿರುವ ಅಲ್ಪಾತೀತ ಉದ್ಯೋಗಾವಕಾಶಗಳು ಎಂಥವರನ್ನಾದರೂ ಆಕ್ರೋಶದಿಂದ ಕೆರಳಿಸುವಂಥವು. ಕನ್ನಡ ನಾಡಿನ ನೆಲ, ಜಲ, ಗಾಳಿ, ವಿದ್ಯುಚ್ಛಕ್ತಿ ಮೊದಲಾದ ಅತ್ಯಮೂಲ್ಯ ಸವಲತ್ತುಗಳನ್ನು ಕಬಳಿಸುತ್ತ, ಕನ್ನಡಿಗರ ಬದಲು ಪರ ಭಾಷಿಕರನ್ನು ತಂದು ಗಿಡಿಯುತ್ತಿರುವುದನ್ನು ನೋಡಿಯೂ ನೋಡದಂತಿರುವ ನಮ್ಮ ಆಡಳಿತ ವ್ಯವಸ್ಥೆಯ ಹಾಗೂ ಮಹಾ ಜನತೆಯ ಔದಾಸೀನ್ಯ, ನಿಷ್ಕ್ರೀಯ ಪ್ರವೃತ್ತಿಗಳಿಗೆ ಏನೆನ್ನಬೇಕೋ ಕಾಣೆ. ಈ ನಿಟ್ಟಿನಲ್ಲಿ ಕೆಲವು ಕನ್ನಡ ಪರ ಸಂಘಟನೆಗಳು ಸಾರ್ವಜನಿಕ ಆಸ್ತಿ ಪಾಸ್ತಿಗಳಿಗೆ ಹಾನಿ ಮಾಡದೆ ಈ ಅನ್ಯಾಯವನ್ನು ಖಂಡಿಸಿ ಪ್ರತಿಭಟಿಸುತ್ತಿರುವುದು ಅಭಿಮಾನದ ಸಂಗತಿ. ಇಂಥವರ ಪೀಳಿಗೆ ವರ್ಧಿಸಲಿ. ಸಂಬಂಧಪಟ್ಟವರ ಕಣ್ತೆರೆಸುವುದರಲ್ಲಿ ಇಂತಹ ಕನ್ನಡದ ಕಟ್ಟಾಳುಗಳ ಪ್ರಯತ್ನ ಪರಿಶ್ರಮಗಳು ಸಫಲವಾಗಲಿ.

ಇನ್ನು ಗಡಿಯ ವಿಷಯ, ಸಮಸ್ಯೆ ಮಾತ್ರವಲ್ಲ, ಒಂದು ಕಗ್ಗಂಟಾಗಿ ಪರಿಣಮಿಸಿದೆ. ಬೆಳಗಾವಿ ಮತ್ತು ಕಾಸರಗೂಡು ಸಮಸ್ಯೆ, ಕನ್ನಡಿಗರ ಪ್ರತಿಷ್ಠೆಯ, ನ್ಯಾಯಯುತವಾದ ನಿಲುವಿನ ಬುಡಕ್ಕೇ ಕೊಡಲಿ ಹಾಕಿರುವಂಥವು; ಅವು ನಮ್ಮ ನಾಡಿನ ಅವಿಭಾಜ್ಯ ಭಾಗಗಳು. ಬೆಳಗಾವಿಯ ಸಮಸ್ಯೆ ಮೆಹರ್‌ಚಂದ್ ಮಹಾಜನ್ ಅವರ ವರದಿಯ ಮೂಲಕ ದಶಕಗಳ ಹಿಂದೆಯೇ ಇತ್ಯರ್ಥವಾಗಿಹೋಗಿದೆ. ಆದರೂ ನೆರೆ ನಾಡಿನ

ಕೆಲವು ರಾಜಕೀಯ ಪ್ರಚೋದಿತ ಹುಲು ವ್ಯಕ್ತಿಗಳ ಚಿತಾವಣೆಯಿಂದ, ಸ್ವಾರ್ಥಾಶಕ್ತಿಯ ದೆಸೆಯಿಂದ ಆಗಾಗ್ಗೆ ಭುಗಿಲೇಳುತ್ತದೆ. ಗಡಿ ನಾಡಿನ ಪ್ರದೇಶದಲ್ಲಿ ಸೌಹಾರ್ದಯುತವಾಗಿ ಬಾಳುತ್ತಿರುವ ಜನಗಳಲ್ಲಿ ನಂಜಿನ ಬೀಜವನ್ನು ಬಿತ್ತಿ ಭಾರತದ ಐಕ್ಯಮತ್ಯ ಮತ್ತು ಸಮಗ್ರತೆಗೆ ಭಂಗ ಉಂಟುಮಾಡುತ್ತಿರುವ ಕುಹಕಿಗಳನ್ನು ಸರ್ಕಾರ ಮತ್ತು ಕನ್ನಡ ಜನ ನಿರ್ದಾಕ್ಷಿಣ್ಯವಾಗಿ ಖಂಡಿಸಬೇಕು. ಇತ್ತೀಚೆಗೆ ನಮ್ಮ ಸರ್ಕಾರ ಬೆಳಗಾವಿಯಲ್ಲಿ ವಿಶೇಷ ವಿಧಾನ ಸಭೆಯನ್ನು ನಡೆಸಿ ಕೆಚ್ಚೆದೆಯ ಅದಟನ್ನು ಪ್ರದರ್ಶಿಸಿದೆ. ಬೆಳಗಾವಿಯ ನೆಲ ಮತ್ತು ಜನಗಳ ಬಗೆಗಿನ ಕಾಳಜಿಯನ್ನು ನಿಸ್ಸಂದೇಹವಾಗಿ ವ್ಯಕ್ತಪಡಿಸಿದೆ. ಇಂತಹ ದಿಟ್ಟ ಮತ್ತು ಸಂದರ್ಭೋಚಿತ ನಿಲವನ್ನು ಸರ್ಕಾರ ಇತರೇ ಗಡಿನಾಡ ಪ್ರದೇಶಗಳ ಬಗೆಗೆ, ಅಲ್ಲಿನ ವಿಶಿಷ್ಟ ಸಮಸ್ಯೆಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆ ಪ್ರದೇಶದ ಕನ್ನಡಿಗರ ಆತ್ಮವಿಶ್ವಾಸ ಮತ್ತು ಸ್ಥೈರ್ಯವನ್ನು ವರ್ಧಿಸುವ ಕೆಲಸವನ್ನು ಕೈಗೊಳ್ಳುವುದು ಸ್ವಾಗತಾರ್ಹವಷ್ಟೇ ಅಲ್ಲ, ಗುರುತರ ಜವಾಬ್ದಾರಿಯಾಗಿದೆ. ನಮ್ಮ ನೆರೆಯ ರಾಜ್ಯಗಳ ಕನ್ನಡ ಶಾಲೆಗಳಿಗೆ ಒದಗುತ್ತಿರುವ ಅಧೋಗತಿಯನ್ನು ನಿವಾರಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಸಮಯೋಚಿತವಾಗಿದೆ.

ಕಾಸರಗೋಡಿನ ವಿಲೀನದ ಪ್ರಶ್ನೆ ಸಹ ನೆನೆಗುದಿಗೆ ಬೀಳುತ್ತದೆ. ಕನ್ನಡಿಗರ ಜನಸಂಖ್ಯೆ ಅಧಿಕವಾಗಿರುವ ಚಂದ್ರಗಿರಿಯ ಉತ್ತರದ ಭೂಪ್ರದೇಶ ನಮಗೆ ಸೇರಬೇಕಾದದ್ದು ಕಾನೂನಿನ ರೀತ್ಯವೂ ಸೂಕ್ತವಾಗಿದೆ. ಆ ಜಿಲ್ಲೆಯನ್ನು ಕರ್ನಾಟಕದಲ್ಲಿ ಸೇರಿಸುವ ಚಳುವಳಿ ಅನೇಕ ದಶಕಗಳಿಂದ ಮುಂದುವರಿದಿದ್ದರೂ ಅದಕ್ಕೆ ಆದ್ಯ ಗಮನವನ್ನು ಸರ್ಕಾರ ಕೊಡದಿರುವುದು ಸರಿ ಎನ್ನಿಸುವುದಿಲ್ಲ. ಇದು ಅಲ್ಲಿನ ನಮ್ಮ ಕನ್ನಡ ಜನತೆಯ ಭಾಷೆ, ಸಂಸ್ಕೃತಿ, ಮತ್ತು ಉಳಿವಿನ ಪ್ರಶ್ನೆ ಅಲ್ಲ, ಸಮಸ್ತ ಕನ್ನಡಿಗರ ಪ್ರತಿಷ್ಠೆ ಮತ್ತು ಆತ್ಮ ಗೌರವದ ಪ್ರಶ್ನೆಯೂ ಆಗಿದೆ ಎಂದು ನನ್ನ ದೃಢವಾದ ಭಾವನೆ.

ನಮ್ಮ ರಾಷ್ಟ್ರದ ಹಾಲಿ ಸ್ಥಿತಿಗತಿಗಳು ಪ್ರಕ್ಷುಬ್ಧ ಸ್ವರೂಪದ್ದಾಗಿವೆ. ಹಿಂದೆ ಬಿಗಡಾಯಿಸಿದ್ದಕ್ಕಿಂತ ಹೆಚ್ಚಾಗಿ ಈಚೆಗಿನ ಒಂದು-ಒಂದೂವರೆ ದಶಕಗಳಲ್ಲಿ ಕುಲಗೆಟ್ಟು ಹೋಗಿವೆ. ಒಂದೊಂದು ರಾಜ್ಯದ ಜನಗಳದೂ ಒಂದೊಂದು ವಿಶಿಷ್ಟವಾದ ಸಮಸ್ಯೆ. ಇದರೊಂದಿಗೆ ಜಾತಿ ಧರ್ಮ ಜನಾಂಗೀಯ ದುರ್ವ್ಯಾಮೋಹ ಬೆರಣಿಯ ಬೆಂಕಿಯ ಹಾಗೆ ಒಳಗೊಳಗೇ ಹೊಗೆಯನ್ನು ಕಾರಿ ಈಚೆಗೆ ವೈಷಮ್ಯ ವೈರಗಳ ಉಗ್ರರೂಪವನ್ನು ತಳೆದು ದಳ್ಳರಿದು ಅಮಾಯಕ ಹೆಣ್ಣು ಗಂಡು ಹಸುಳೆಗಳ ಪ್ರಾಣಹಾನಿಯನ್ನು; ಆಸ್ತಿಪಾಸ್ತಿಗಳ, ಸಾರ್ವಜನಿಕ ಕಟ್ಟಡ ವಾಹನ ಮುಂತಾದವುಗಳ ಸರ್ವನಾಶವನ್ನು ನಡೆಸಿರುವ ಲೆಕ್ಕವಿರದಷ್ಟು ಪುರಾವೆಗಳು ನಮ್ಮೆದುರಿಗಿವೆ. ಇದರ ಜೊತೆಗೆ, ಧರ್ಮಾಂಧತೆಯ ಕವಚ ತೊಟ್ಟ ಭಯೋತ್ಪಾದನೆಯ ರಾಕ್ಷಸೀ ಕೃತ್ಯ ಇಡೀ ರಾಷ್ಟ್ರದಲ್ಲಿ ಭುಗಿಲೆದ್ದು ಭಯಾತಂಕಗಳನ್ನು ದಿನನಿತ್ಯ ಹೆಚ್ಚಿಸಿ, ನೆಮ್ಮದಿಯಿಂದ ಬಾಳುತ್ತಿದ್ದವರ ನಡುವೆ ಹುಳಿ ಹಿಂಡತೊಡಗಿದೆ. ಪೈಶಾಚಿಕ ಮಾರಣ ನೃತ್ಯಕ್ಕೆ ಬಲಿಯಾಗುತ್ತಿರುವ ಮುಗ್ಧರ ಸಂಖ್ಯೆ ಕಡಿಮೆಯೇನಲ್ಲ. ಜಾತಿ, ಮತ, ಧರ್ಮ, ರಾಜ್ಯ ಮೊದಲಾದ ಭೇದವಿಲ್ಲದೆ ಎಲ್ಲರೂ ಒಮ್ಮನಸ್ಸಿನಿಂದ

ಒಗ್ಗೂಡಿ ಇಂತಹ ದಾನವೀಯ ಪ್ರವೃತ್ತಿಯನ್ನು ಪ್ರತಿಭಟಿಸಬೇಕು. ಇಷ್ಟು ಮಾತ್ರವಲ್ಲದೆ ಭಾರತೀಯರೆಲ್ಲರೂ ತಮ್ಮ ನಡುವಿನ ಭೇದಗಳೇನಿದ್ದರೂ ಸದ್ಯ ಮರೆತು ಭಯೋತ್ಪಾದನೆಯನ್ನು ಬೇರು ಸಹಿತ ಕಿತ್ತು ಉಚ್ಚಾಟಿಸುವ ದಿಟ್ಟತನವನ್ನು ತೋರುವುದೂ ಕೂಡ ರಾಷ್ಟ್ರದ ಹಿತದೃಷ್ಟಿಯಿಂದ ಅತ್ಯಂತ ತುರ್ತಿನ ವಿಷಯವಾಗಿದೆ.

ರಾಷ್ಟ್ರದ ದುರಂತವೆಂದರೆ ನಮ್ಮ ಹಿತವನ್ನು ಕಾಪಾಡುವ, ಸಂಕಷ್ಟದಲ್ಲಿ ನಮ್ಮನ್ನು ರಕ್ಷಿಸಿ ಪಾರು ಮಾಡುವ ವಾಗ್ದಾನವನ್ನು ಮಾಡಿ ಆಯ್ಕೆಯಾದ ಹುದ್ದರಿಗಳಿಗೆ ರಾಷ್ಟ್ರದ ಒಟ್ಟಾರೆ ಒಳಿತಿನ ಬಗೆಗೆ, ಅವಿಚ್ಛಿನ್ನ ಸಮಗ್ರತೆಯ ಬಗೆಗೆ ಹೆಚ್ಚು ತಲೆ ಕೆಡಿಸಿಕೊಳ್ಳಲು ಪುರುಸೊತ್ತಿರುವುದಿಲ್ಲ. ತಮ್ಮ ತಮ್ಮಲ್ಲೇ ಕಚ್ಚಾಡುತ್ತಾ ಸ್ವಂತ ಏಳಿಗೆಯ ಬಗೆಗೆ ಹಗಲಿರುಳು ಚಿಂತಿಸುತ್ತಾ ಮೆರೆಯುವುದಕ್ಕೆ ಧಾರಾಳವಾಗಿ ಸಮಯ ಇರುತ್ತದೆ. ಸಮಸ್ಯೆಗಳನ್ನು ನೀಗಿಸುವುದಿರಲಿ, ಅವುಗಳನ್ನು ಸದಾ ಜ್ವಲಂತವಾಗಿಡುವ, ಸಮಸ್ಯೆಗಳು ಇಲ್ಲದಿದ್ದಲ್ಲಿ ಹೊಸದಾಗಿ ಸಮಸ್ಯೆಗಳನ್ನು ಹುಟ್ಟುಹಾಕುವ ಕಲೆಯನ್ನು ಕರಗತ ಮಾಡಿಕೊಂಡಿರುವ ಈ ಇಬ್ಬಂದಿ ವ್ಯಕ್ತಿತ್ವದ ಮಂದಿ ಇವರು, ಮೂರು ಹೊತ್ತೂ ದೇಶದ ಒಳತಿನ ಜಪ ಮಾಡುತ್ತಲೇ ಸ್ವಂತ ಬೇಳೆಯನ್ನು ಬೇಯಿಸಿಕೊಳ್ಳುವುದರಲ್ಲಿ ಅದ್ವಿತೀಯರು.

ಬಹು ರತ್ನಗರ್ಭೆಯೂ ನಿತ್ಯ ಹರಿದ್ವರ್ಣ ತರುಲತಾದಿ ನದೀನದ ಸಂಪನ್ಮೂಲ ಸಂಪನ್ನೆಯೂ ಸೌಭಾಗ್ಯ ಸಮೃದ್ಧಿಪ್ರದಾಯಿನಿಯೂ ಆದ ನಮ್ಮ ಕನ್ನಡಮ್ಮನನ್ನು ಹಾಡುಹಗಲೇ ವಿವಸ್ತ್ರಗೊಳಿಸಿ ಶೋಷಿಸುತ್ತಿರುವ ದುಶ್ಶಕ್ತಿಗಳಲ್ಲಿ ಪರ ರಾಜ್ಯದ ಬಂಡವಾಳಿಗ ರಾವಣಾಸುರರೇ ಅಲ್ಲದೆ, ನಮ್ಮ ಸ್ವಂತ ಧನ ಪಿಶಾಚಿ ದುರ್ಯೋಧನರೂ ಕೈ ಮಿಲಾಯಿಸಿದ್ದಾರೆ. ಇದಲ್ಲದೆ, ಸ್ವತಃ ಸರಕಾರಗಳೇ ಕೆಲವು ಜನಪರವಾದ ಯೋಜನೆಗಳ ಹೆಸರಿನಲ್ಲಿ ನಮ್ಮ ಸಿರಿವಂತ ಗಿರಿ ದರಿಗಳ ಹಸುರಿನ ಹಚ್ಚನೆಯ ಖಜಾನೆಯನ್ನು, ಬೆಲೆ ಕಟ್ಟಲಾಗದ ಲೋಹ ಧಾತುಗಳನ್ನು, ಶಿಲೆಗಳನ್ನು ಸದಾ ಕಾಲಕ್ಕೂ ಬರಿದಾಗಿಸಿಬಿಟ್ಟಿದ್ದಾರೆ. ಒಮ್ಮೆ ಪ್ರಕೃತಿಯ ಅತ್ಯಮೂಲ್ಯ ಮಹದೈಸಿರಿಯನ್ನು ವಿವೇಚನೆಯಿಲ್ಲದೆ ಖಾಲಿಗೊಳಿಸಿಬಿಟ್ಟರೆ, ಮತ್ತೆ ಅಂಥದ್ದನ್ನು ಬೆಳೆಸಿ ಉಳಿಸಲಾಗದು, ಅದಕ್ಕೆ ಪರ್ಯಾಯಗಳನ್ನು ಕಂಡುಕೊಳ್ಳಲಾಗದು ಎಂಬ ಸರಳ ಸತ್ಯ ಸಂಗತಿಯೂ ಅವರಿಗೆ ಹೊಳೆಯದಿರುವುದು ಅಥವಾ ಗೊತ್ತಿದ್ದೂ ನಿಸರ್ಗದ ಮೇಲೆ ಇಂತಹ ಘೋರ ಅತ್ಯಾಚಾರ ಎಸಗುವುದು ಮಹಾ ಪಾಪಕರ ಮತ್ತು ಖಂಡನೀಯ.

ನಮ್ಮ ಶಿವಮೊಗ್ಗೆಯ ಮತ್ತು ದಕ್ಷಿಣ ಕನ್ನಡದ ಅಗ್ಗಳಿಕೆಯ ಪಶ್ಚಿಮ ಘಟ್ಟಗಳಲ್ಲಿ, ಕೊಡಗಿನಲ್ಲಿ ಹಾಗೂ ಕರ್ನ್ನಾಟಕದ ಇತರ ಹಲವಾರು ಭಾಗಗಳಲ್ಲಿ ಪರ್ವತಾರಣ್ಯಗಳ ವೈವಿಧ್ಯಮಯ ವನಸ್ಪತಿಯ, ಅನರ್ಘ್ಯ ಶಿಲೆ ಖನಿಜ ಪ್ರಾಣಿ ಪಕ್ಷಿಗಳ ನಾಮಾವಶೇಷದ ಪ್ರಮಾಣಕ್ಕೆ ಸಾಟಿಯಾದದ್ದು ನಮ್ಮ ರಾಷ್ಟ್ರದ ಇತರೆಡೆಗಳಲ್ಲಿ ಇಲ್ಲವೆನ್ನಬೇಕು. ಶತಮಾನಗಳಿಂದ ಕಾಡುಮೇಡುಗಳ ಸ್ವಾಭಾವಿಕ ಅಂಗವೆಂಬಂತೆ ಅವಿನಾರೀತಿಯಿಂದ ಬಾಳಿ ಬದುಕಿದ್ದ ಅಮಾಯಕ ಜನರನ್ನು, ಪ್ರಾಣಿ ಪಕ್ಷಿಗಳನ್ನು ಅಹಿತವಾದ ಪರಿಸರಗಳಿಗೆ ಒಕ್ಕಲೆಬ್ಬಿಸಿ ಸ್ವಂತದ ಬೇಳೆಯನ್ನು ಬೇಯಿಸಿಕೊಳ್ಳುತ್ತಿರುವ ಬಂಡವಾಳಷಾಹಿ ಖದೀಮರಿಗೆ ಕಡಿವಾಣವೇ

ಇಲ್ಲ. ಎಲ್ಲೆಲ್ಲೂ ಸರ್ವವ್ಯಾಪಿಯಾಗಿರುವ ಭ್ರಷ್ಟಾಚಾರದ ಸಂರಕ್ಷಣೆ ಅವರಿಗಿರುವುದರಿಂದ, ಅಧಿಕಾರಿಗಳಾದಿಯಾಗಿ ಸರಕಾರದ ಉನ್ನತ ಅಂತಸ್ತಿನಲ್ಲಿ ವಿರಾಜಮಾನರಾಗಿರುವ ಪ್ರಭೃತಿಗಳ ಕೃಪಾಕಟಾಕ್ಷಕ್ಕೆ ಆ ಶ್ರೀಮಂತ ಪಟ್ಟಭದ್ರ ಪ್ರಭೃತಿಗಳು ಪಾತ್ರರಾಗಿರುವುದರಿಂದ, ಈ ಖದೀಮರ ಪ್ರಕೃತಿ ವಿನಾಶಕ, ಪರಿಸರ ನಿರ್ನಾಮಕ ಹೊಲೆ ಬುದ್ಧಿಗೆ ಅಂಕುಶವೇ ಇಲ್ಲ. ಈ ನಿಟ್ಟಿನಲ್ಲಿ ನಡೆಯುವ ಜನಹಿತಪರ ಚಳುವಳಿ, ಪ್ರತಿಭಟನೆಗಳಿಗೆ ಹೆಚ್ಚಿನ ಒತ್ತಾಸೆ ಬೆಂಬಲಗಳು ಸಿಕ್ಕದೆ, ಹಾಳಾಗುತ್ತಿರುವ ಅರಣ್ಯಗಳಂತೆಯೇ ಅವೂ ಅರಣ್ಯರೋದನ ಮಾತ್ರವಾಗುತ್ತಿವೆ.

ಸ್ಥಾವರಗಳಿಗೆ, ಭಾರೀ ಉದ್ಯಮಾಗಾರಗಳಿಗೆ ಉತ್ತೇಜನ ನೀಡುವುದು ಆಡಳಿತದ ಕರ್ತವ್ಯವೇ ಆಗಿದ್ದರೂ ಉಚಿತಾನುಚಿತ ಪ್ರಜ್ಞೆಯ ಕೊರತೆಯ ದೆಸೆಯಿಂದ ಅಗತ್ಯಕ್ಕಿಂತ ನೂರು ಪಾಲು ಹೆಚ್ಚಿನ ಪ್ರಕೃತಿಯನ್ನು ಅದರ ಅನರ್ಘ್ಯ ಸಂಪನ್ಮೂಲಗಳನ್ನು ಹಾಳ್ಗೆಡಿಸುವುದು ಮಹಾ ಅಪರಾಧವೆನ್ನದೆ ವಿಧಿಯಿಲ್ಲ.

ಶತಮಾನಗಳಿಂದ ಮನುಷ್ಯ ಮತ್ತು ಇತರ ಜೀವ ಸಂಕುಲಗಳಿಗೆ ಸಂಜೀವಿನೀಪ್ರಾಯವಾದ ನಿಸರ್ಗವನ್ನು ಹುಟ್ಟಳಿಸಿಹಾಕುವುದರಿಂದ, ತಿರುಪತಿಯ ಕ್ಷೌರದಂತೆ ಅದರ ಅವಿಚ್ಛಿನ್ನ ಅಂಗಗಳನ್ನು ವಿವೇಕವಿಲ್ಲದೆ ಅಲ್ಲಿ ಇಲ್ಲಿ ಹಾಚುಪಾಚಾಗಿ, ಅವ್ಯವಸ್ಥಿತವಾಗಿ ನಾಶಪಡಿಸಿ ಇಡೀ ಪ್ರದೇಶವನ್ನು ಅಪ್ರಯೋಜಕಗೊಳಿಸುವುದರಿಂದ ಪ್ರಕೃತಿ ಕನಲಿ ಎಂತಹ ಭೀಕರ ಸೇಡನ್ನು ತೀರಿಸಿಕೊಳ್ಳುತ್ತದೆ ಎನ್ನುವುದಕ್ಕೆ ಅನಾವೃಷ್ಟಿ ಬರಗಳಲ್ಲದೆ, ಅಕಾಲಿಕ ಮಳೆಯ ಹಾವಳಿಯಿಂದ ಮಳೆ, ಬೆಳೆ, ಪರಿಸರದ ಏರುಪೇರು ಹಾಗೂ ಹವಾಮಾನದ ವೈಪರೀತ್ಯ, ವಾಯು ಮಾಲಿನ್ಯ ಮುಂತಾದ ಗಂಡಾಂತರಕಾರಿ ಪ್ರಾಕೃತಿಕ ಘಟನೆಗಳು ಮನುಷ್ಯ ಹಾಗೂ ಇತರೆ ಜೀವಿಗಳ ಬದುಕಿಗೆ ಎಂತಹ ಸಂಚಕಾರವನ್ನು ತರುತ್ತಿವೆ ಎನ್ನುವುದರ ಅರಿವು ಈಚಿನ ವರ್ಷಗಳಲ್ಲಿ ನಮಗಾಗಿದೆ. ಬೇಗ ಎಚ್ಚೆತ್ತುಕೊಂಡು ನಿಸರ್ಗದ ಮೇಲಿನ ಮಾನಭಂಗವನ್ನು ತಡೆಯದಿದ್ದರೆ, ಭವಿಷ್ಯದಲ್ಲಿ ನಮ್ಮೆಲ್ಲರ ಬದುಕು ದುರಂತಮಯವಾಗುವುದರಲ್ಲಿ ಸಂದೇಹವಿಲ್ಲ.

ಇಂದಿನ ಸಂದಿಗ್ಧ ಸಮಯದಲ್ಲಿ ನಮ್ಮ ರಾಷ್ಟ್ರಕ್ಕೆ ಅನಿವಾರ್ಯವಾಗಿರುವುದು ವೈಚಾರಿಕ ಸ್ವರೂಪದ ಮಾರ್ಗೋಪಾಯಗಳ ಜೊತೆಗೆ ಅಥವಾ ಅದಕ್ಕಿಂತ ಅತ್ಯಧಿಕ ಮಿಗಿಲಾಗಿ ಭಾವಾತ್ಮಕ ಸ್ವರೂಪಿಯಾದ ಕಾರ್ಯಾಚರಣೆ. ಇದು ಸಾಹಿತ್ಯ ಮತ್ತು ವಿವಿಧ ಕಲೆಗಳ ಮೂಲಕ ನೆರವೇರುವಂಥದ್ದು. ಅದರಲ್ಲೂ, ಸಾಹಿತ್ಯ ಇಂತಹ ಒಂದು ರಾಷ್ಟ್ರ ಕಲ್ಯಾಣಕಾರಿ ಕಾಯಕದಲ್ಲಿ ಪ್ರಮುಖ ಪಾತ್ರವನ್ನು ವಹಿಸಬಹುದು; ಹೆಚ್ಚು ಜನಪರ ಮತ್ತು ಸಮಾಜೋಪಕಾರಿಯಾಗಬಹುದು. ಅದರ ಮಾನವೀಯವೂ, ಹೃದ್ಯವೂ ಆಗಿರುವ ಉದಾರ ಸಂದೇಶ ಸಿಡಿದು ಹೋಗುತ್ತಿರುವ ರಾಷ್ಟ್ರ ಜೀವನದ ಅಲಾಯದಗೊಂಡ ಚೂರುಗಳನ್ನು ಮತ್ತೆ ಸೌಹಾರ್ದ ಸೌಮನಸ್ಯಗಳಿಂದ ಬೆಸೆದು ಒಗ್ಗೂಡಿಸುವ ದಿಸೆಯಲ್ಲಿ ಸಮರ್ಥ ಸಾಧನವಾಗಬಹುದು.

'ಭಾವೈಕ್ಯ' ಎನ್ನುವ ಪದ ಅರ್ಥಪೂರ್ಣ ನಿಜ. ಈ ಪದ ಇಂದು ರಾಜಕೀಯ

ಮತ್ತು ಆಡಳಿತದ ವಲಯಗಳಲ್ಲಿ ಹೆಚ್ಚು ಚಾಲ್ತಿಯನ್ನು ಪಡೆದಿದೆ. ಆದರೆ ಭಾವೈಕ್ಯಕ್ಕಿಂತ 'ಭಾವ ಸಮನ್ವಯ' ಅಥವಾ 'ಭಾವ ಸಾಮರಸ್ಯ' ಹೆಚ್ಚು ಸೂಕ್ತವಾದ ಮಾತೆಂದು ನನ್ನ ಎಣಿಕೆ. ಭಾವೈಕ್ಯದಲ್ಲಿ ಎಲ್ಲವೂ ಒಂದಾಗಿ ತಮ್ಮ ವಿಶಿಷ್ಟ ಚಹರೆಗಳನ್ನು ಕಳೆದುಕೊಳ್ಳುವ ಅರ್ಥಚ್ಛಾಯೆಯಿರುವ ಭಯವಿದೆ. ದೇಶದ ಸಮಗ್ರತೆ ಮತ್ತು ಏಕತೆಯ ಹೆಸರಿನಲ್ಲಿ ವ್ಯಕ್ತಿ ಮತ್ತು ಸಮೂಹದ ವಿಶಿಷ್ಟವಾದ ಆಚಾರ ವಿಚಾರಗಳು, ಉಡುಗೆ ತೊಡುಗೆಗಳು, ಉಣಿಸು, ಮತ ಧರ್ಮದ ಶ್ರದ್ಧಾಭಾವನೆಗಳು ಇನ್ನಿತರ ಜನಾಂಗೀಯ ಸ್ವಂತಿಕೆಗಳು ಭಾವೈಕ್ಯದಲ್ಲಿ ತಮ್ಮ ಅತಿಶಯತೆಯನ್ನು ನೀಗಿಕೊಂಡು, ಚಹರೆ ನೀಗಿದ ಸೈನಿಕ ಕವಾಯತನ್ನು ಹೋಲಬಹುದು. ನಮ್ಮ ವೈಯಕ್ತಿಕವಾದ ವೈಶಿಷ್ಟ್ಯಗಳನ್ನು, ವೈವಿಧ್ಯಗಳನ್ನು ಮತ್ತು ವೈಲಕ್ಷಣ್ಯಗಳನ್ನು ಹಾಗೆಯೇ ಉಳಿಸಿಕೊಂಡೂ ನಾವೆಲ್ಲ ಒಂದೆನ್ನುವ ಭಾವನೆ ಈ ದೇಶದಲ್ಲಿ ಶತಮಾನಗಳಿಂದ ಜಗತ್ತಿಗೊಂದು ಅಪ್ರತಿಮ ಉದಾಹರಣೆಯಾಗಿ ಸಂದಿದೆ. ಹಾಗೆಂದು ನಮ್ಮ ನಮ್ಮಲ್ಲಿ ಒಡಕು, ಅಸಹಿಷ್ಣುತೆ, ಮತ್ಸರ ಮುಂತಾದ ಮಾರಕ ಭಾವನೆಗಳಿಲ್ಲವೆಂದಲ್ಲ. ಆದರೆ ರಾಷ್ಟ್ರ ಹಿತದ ಪ್ರಶ್ನೆ ಎದುರಾದಾಗ ನಮ್ಮ ನಾಡಿನ ಗಡಿ ಪ್ರದೇಶಗಳಲ್ಲಿ ನೆರೆಯ ದುರಾಕ್ರಮಣಗಳ ಉಪಟಳ ಹೆಚ್ಚಾದಾಗ ನಾವೆಲ್ಲ ನಮ್ಮ ನಡುವಣ ಸಣ್ಣಪುಟ್ಟ ಭೇದಗಳನ್ನು ಮರೆತು ಹಿಂದೆಲ್ಲ ಒಂದಾಗಿದ್ದೇವೆ. ಮುಂದೆಯೂ ಇದನ್ನು ಸಂದೇಹಿಸಬೇಕಾದ್ದಿಲ್ಲ.

ಬಹು ಸಂಸ್ಕೃತಿಯ ಈ ನಮ್ಮ ಮಹಾನ್ ದೇಶಕ್ಕೆ 'ಭಾವ ಸಾಮರಸ್ಯ'ದ ಪರಿಕಲ್ಪನೆಯೇ ಸೂಕ್ತ ಹಾಗೂ ಸುಸಂಗತ. ಒಂದು ತೋಟದಲ್ಲಿ ಒಂದೇ ಬಗೆಯ ಹೂವಿದ್ದರೆ ಅದರ ನೋಟ ಏಕತಾನತೆಯ ಬೇಸರ ಉಂಟು ಮಾಡುತ್ತದೆ. ಹೀಗೆಯೇ ಭಾವೈಕ್ಯದ ಪರಿಕಲ್ಪನೆ ಸಹ. ನಮ್ಮೆಲ್ಲಾ ವಿಶೇಷತೆಗಳನ್ನು ತೊಡೆದು ಒಂದೇ ಬಗೆಯ ಬದುಕಿನ ರೀತಿ ಮತ್ತು ಆಶೋತ್ತರಗಳನ್ನು ಹೊಂದಿದಾಗ, ಅರ್ಥಾತ್ ಏಕ ಸಂಸ್ಕೃತಿಯ ಭಾವನೆಗೆ ಇಂಬು ಕೊಟ್ಟಾಗ ಅದು ಒಂದೇ ಬಗೆಯ ಪುಷ್ಪವನದಂತೆ ಕಂಡೀತು. ಅದೇ, ಒಂದು ಉದ್ಯಾನದಲ್ಲಿ ಹಲವು ಬಗೆಯ ಪುಷ್ಪಗಳಿದ್ದಾಗ, ಉದಾಹರಣೆಗೆ ಮಲ್ಲಿಗೆ, ಜಾಜಿ, ಇರುವಂತಿಗೆ, ಕನಕಾಂಬರ, ಚೆಂಡು ಹೂ ಇತ್ಯಾದಿಗಳಿದ್ದಾಗ, ಅವು ಕಂಪು ಆಕಾರ ಮತ್ತು ಬಣ್ಣಗಳಲ್ಲಿ ಭಿನ್ನವಾಗಿದ್ದರೂ ಪರಸ್ಪರ ಸಹಕರಿಸಿಕೊಂಡು ಇಡೀ ಆ ಉಪವನಕ್ಕೆ ಒಂದು ವೈವಿಧ್ಯದ, ವೈಶಿಷ್ಟ್ಯದ ಹೆಚ್ಚುಗಾರಿಕೆ ಹಾಗೂ ಶೋಭೆಯನ್ನು ತರುತ್ತವೆ. ನೋಡುವವರ ಕಣ್ಮನಗಳನ್ನು ಆಪ್ಯಾಯನಗೊಳಿಸುತ್ತವೆ. ಇದೇ, 'ಭಾವೈಕ್ಯ' ಮತ್ತು 'ಭಾವ ಸಾಮರಸ್ಯ'ಕ್ಕೆ ಇರುವ ವ್ಯತ್ಯಾಸ. ಇಂದು ನಮಗೆ ಬೇಕಾಗಿರುವುದು ಮನಸ್ಸುಗಳನ್ನು ಒಗ್ಗೂಡಿಸುವ, ಪರಸ್ಪರ ಸೋದರತ್ವದ ತತ್ತ್ವವನ್ನು ಸಮ್ಮತಿಸಿದ, ವಿಭಿನ್ನತೆಯಲ್ಲಿ ಏಕತೆಯನ್ನು ದರ್ಶಿಸುವ ಇಂತಹ ಸಮರಸತೆ.

ಒಟ್ಟಿನಲ್ಲಿ, ಪಿತ್ತೋದ್ರೇಕವಿಲ್ಲದ ದೇಶ ಪ್ರೀತಿ, ಪರಾಕ್ರಮಣಶೀಲವಲ್ಲದ ಸ್ವಭಾಷೆ ಸ್ವಸಂಸ್ಕೃತಿಗಳ ಸದಾಭಿಮಾನ ಹಾಗೂ ನಾಗರಿಕತೆಯ ಮೆರೆತಕ್ಕೆ ಅನುರೂಪವಾದ ಅಂತಸ್ಸಂಸ್ಕೃತಿಯ ಶಿಕ್ಷಣ-ಸಹಬಾಳ್ವೆಯ ಬಗೆಗೆ ಯುಕ್ತ ತಿಳುವಳಿಕೆಯನ್ನು ನೀಡಿ

ಮಹಾಜನರ 'ಮಂದಿತನ'ವನ್ನು ನೀಗಿ, ಅವರನ್ನು ಪೌರಪ್ರಜ್ಞರನ್ನಾಗಿ ಪರಿವರ್ತಿಸುವ ಸತ್ಕಾಯಕದಲ್ಲಿ ಸಾಹಿತ್ಯ ಗಣನೀಯ ಪಾತ್ರವನ್ನು ವಹಿಸಬಹುದು. ವಿಶ್ವಮಾನವತೆಯ ಭಾವನೆಯನ್ನು ನಮ್ಮ ಹೆಮ್ಮೆಯ ನಾಡಿನ ಪೀಳಿಗೆಯಲ್ಲಿ ಬೇರೂರಿಸುವಲ್ಲಿ ಹೊಸ ಆಶೋತ್ತರಗಳ ಹಾಗೂ ದೃಷ್ಟ್ಯಂತರ ಉಳ್ಳ ಸಾಹಿತ್ಯ ಸಾರ್ಥಕವಾಗಬಹುದು.

ಬದುಕಿನ ಇಳಿಜಾರಿನ ಈ ಹಂತದಲ್ಲಿ ನಿಂತು ಆಲೋಚಿಸಿದಾಗ ನಾನು ಎಷ್ಟನ್ನೋ ಗಳಿಸಿದ್ದೇನೆ; ಮತ್ತೆಷ್ಟನ್ನೋ ಕಳೆದುಕೊಂಡಿದ್ದೇನೆ; ಎಷ್ಟೋ ನನಗರಿವಿಲ್ಲದೆಯೇ ನನ್ನ ಕೈಯಿಂದ ಜಾರಿಕೊಂಡಿದೆ. ಇನ್ನೂ ಎಷ್ಟನ್ನೋ ಗಳಿಸಬೇಕೆಂಬ ಆಸೆಯನ್ನು ಬೆಳೆಸಿಕೊಂಡಿದ್ದೇನೆ. ಅವು ಕೈಗೂಡುವುವೋ ಇಲ್ಲವೋ ಎನ್ನುವ ಶಂಕೆಯೂ ಕಾಡದೆ ಇಲ್ಲ. ಇದು ಹೇಗೆ ಇರಲಿ, ನನ್ನ ಬದುಕಿನಲ್ಲಿ ಯಾವುದೋ ಒಂದು ಕಾಲ ಸ್ನೇಹ, ಪ್ರೀತಿ, ಹೃದಯ ಸಂಪನ್ನತೆ, ಉಲ್ಲಾಸಗಳನ್ನು ಧಾರಾಳವಾಗಿ ನನಗೆ ಧಾರೆ ಎರೆದು, ತಾವು ನನ್ನಿಂದ ಏನನ್ನು ಪಡೆದರೋ ಏನನ್ನು ಇಲ್ಲವೋ, ಬಹಳಷ್ಟನ್ನು ಗಳಿಸಿಕೊಂಡೆವು ಎಂದು ನನಗೆ ಭರವಸೆಯನ್ನಿತ್ತು ಹಾದಿ ಮಧ್ಯದಲ್ಲೇ ಮರೆಯಾದ ಆತ್ಮೀಯರನ್ನು ನಾನು ನೆನೆದಾಗ ಒಂದು ಬಗೆಯ ಖೇದಭರಿತ ವಿಷಣ್ಣ ಭಾವ ಅಂತರಂಗವನ್ನು ಆಚ್ಛಾದಿಸುತ್ತದೆ. ಅಂತಹ ಹಲವು ಹಿರಿಯ ಕಿರಿಯ ಸಾರ್ಥಕ ಚೇತನಗಳಲ್ಲಿ ಸಂಕೇತಪ್ರಾಯವಾಗಿ ಒಬ್ಬರನ್ನು ಮನದಾಳದಿಂದ ನಾನು ಸ್ಮರಿಸಬೇಕು. ಈಚೆಗೆ ನಮ್ಮನ್ನು ಅಗಲಿದ, ವಿನಯ ಸಜ್ಜನಿಕೆಗಳ ಸಾಕಾರವೆನ್ನಿಸಿದ ಹಿರಿಯ ಮಿತ್ರರೂ ಕನ್ನಡ ಚಲನಚಿತ್ರ ಜಗತ್ತಿನ ಶಕ ಪುರುಷರೂ ಆದ ಡಾ॥ರಾಜಕುಮಾರ್.

ಮತ್ತೆ ಕೆಲವರು ಎಂದೋ ಒಮ್ಮೆ ನನ್ನ ಒಡನಾಡಿಗಳಾಗಿ, ನೋವು ನಲಿವಿನ ಪಾಲುಗಾರರಾಗಿ ತಮ್ಮ ಸ್ವಂತ ಅಗಚಾಟಲುಗಳನ್ನು ಮರೆಸಿ, ಪ್ರಸನ್ನತೆಯನ್ನು ಪ್ರದರ್ಶಿಸುತ್ತಾ ಜೊತೆ ಜೊತೆಗೆ ಹೆಜ್ಜೆ ಹಾಕುತ್ತ ಬಂದಿದ್ದಾರೆ. ಇಂತಹ ಸ್ನೇಹ ಜೀವಿಗಳ ಸಂಗದ ಪಾವಿತ್ರ್ಯವನ್ನು ನೆನೆದಾಗ ಬದುಕಿಗೆ ಮೂಡುವ ಧನ್ಯತಾ ಭಾವ ವಾಗತೀತವಾದದ್ದು. ನನಗೆ ಜನ್ಮಗಳಲ್ಲಿ ನಂಬಿಕೆ ಇಲ್ಲ. ಒಂದು ವೇಳೆ ಅವು ಇದ್ದರೆ, ಎಷ್ಟೇ ಕಷ್ಟ ನಷ್ಟವಾಗಿದ್ದರೂ ನಾನು ಹಲವಾರು ಜನ್ಮಗಳನ್ನು ನನ್ನ ಸಂಗಡಿಗ ಸ್ನೇಹ ಜೀವಿಗಳ ಸಹವಾಸದಲ್ಲಿ, ಮಹಾನ್ ಪರಂಪರೆಯ ಈ ನನ್ನ ಭಾರತ ದೇಶದಲ್ಲಿ, ಅದರಲ್ಲೂ ನನ್ನ ಅಚ್ಚುಮೆಚ್ಚಿನ ಕರ್ನಾಟಕದಲ್ಲಿ, ಮಿಗಿಲಾಗಿ ಬೆಂಗಳೂರು ಮತ್ತದರ ಲಾಲ್‌ಬಾಗ್ ಹಾಗೂ ಗಾಂಧಿಬಜಾರಿನ ಚೇತನೋತ್ಸಾಹದ ಜೀವೋತ್ಕರ್ಷಕಾರಕ ಪರಿಸರದಲ್ಲಿ ಮೈ ತಳೆಯಬೇಕೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಹಾಗೆಯೇ, ನನ್ನ ಉಸಿರಾದ ಕನ್ನಡ ನುಡಿಯ ಮೂಲಕ ಕರುನಾಡ ತಾಯಿಯ ಪಾವನತರ ಸೇವೆಯನ್ನು ಮಾಡುವ ಅವಕಾಶಕ್ಕೆ ನೀವೆಲ್ಲರೂ ಹರಸಿ ಹಾರೈಸಬೇಕೆಂದು ವಿನಮ್ರವಾಗಿ ಬಿನ್ನವಿಸುತ್ತೇನೆ.

****

ವೇದದ ದೃಷ್ಟಿಯಲ್ಲಿ ಭಗವಂತನ ಉಪಾಸನೆ

-ವಿನೋಬಾ

ವೇದದ ತಾತ್ಪರ್ಯವನ್ನು ಹೇಳುತ್ತಾ ಭಾಗವತ ಹೀಗೆ ಹೇಳುತ್ತದೆ.
ಮಾಮ್ ವಿಧ್ಯತ್ತೇಬಿಧತ್ತೆ ಮಾಮ್ ವಿಕಲ್ಪಯಾ ಪೊಯಾತೆ ತ್ವಹಂ।
ಏತಾವಾನ್ ಸರ್ವವೇದಾರ್ಥಃ ಶಬ್ದ ಆಸ್ಥಾಯ ಮಾಮ್ ಭಿದಾಂ।
ಮಾಯ ಮಾತ್ರಂ ಅನೋಧಾತ್ತೆ ಪ್ರತಿಶ್ಯಧ್ಯ ಪ್ರಶಾಮ್ಯತಿ। (ಭಾ.ಸ.೨೧.೫)

ವೇದವು ಭಗವಂತನ ವಿಷಯದಲ್ಲಿ ವಿಧಿಯನ್ನು ಹೇಳುತ್ತದೆ. ಭಗವಂತನ ವರ್ಣನೆ ಮಾಡುತ್ತದೆ ಮತ್ತು ವೇದದ ಮೂಲಕ ಶಬ್ದಗಳಿಂದ ವಿವಿಧ ರೂಪದಲ್ಲಿ ಯಾವುದ್ಯಾವುದನ್ನು ಗುರಿಯಾಗಿಟ್ಟುಕೊಂಡು ವಿಶ್ವಕರ್ತಾ ಎಂಬಿತ್ಯಾದಿ ನಾನಾ ಪ್ರಕಾರದ ಕಲ್ಪನೆಗಳನ್ನು ಮಾಡಲಾಗುತ್ತದೊ ಮತ್ತು ಅಳಿಸಲಾಗುತ್ತದೊ ಅದು ತಾನೇ ಅಂದರೆ ಪರಮಾತ್ಮ. ಇದೇ ವೇದಗಳ ಸಂಪೂರ್ಣ ಸಾರ. ಒಂದು ವೇಳೆ ವೇದವು ವಿಧಾನ ಮಾಡುತ್ತದೆಂದರೆ ಅದು ಭಗವಂತನ ವಿಧಾನವೆಂದು ತಿಳಿದೇ ಮಾಡುತ್ತದೆ. ವಿಧಾನಕ್ಕೆ ವಿಶೇಷ ಅರ್ಥ ಇದೆ. ವೇದದಲ್ಲಿ ಬರುವ ಆಜ್ಞೆಗಳನ್ನೂ ಯಾವುದನ್ನು ಮಾಡಬೇಕೆಂದು ಹೇಳಲಾಗಿರುವುದನ್ನೂ ವಿಧಾನವೆಂದು ಹೇಳಲಾಗಿದೆ. ವೇದವು ಮಾಡ ಹೇಳುವ ಕರ್ಮಗಳು ಭಗವಂತನ ಉಪಾಸನೆಗಾಗಿ. ಕರ್ಮಗಳೇನೊ ಅನೇಕ ಆದ್ದರಿಂದ ಒಂದೇ ಕರ್ಮದಿಂದ ಭಗವಂತನ ಉಪಾಸನೆ ಆಗುತ್ತದೆಂದೇನೂ ಅಲ್ಲ. ಭಿನ್ನ ಭಿನ್ನವಾದ ಎಲ್ಲ ಕರ್ಮಗಳನ್ನೂ ಭಗವಂತನಿಗಾಗಿಯೆ ಮಾಡಬೇಕಾಗುತ್ತದೆ. ಅಭಿಧಾನವೆಂದರೆ ದೇವತೆಗಳ ಹೆಸರು. ಅಗ್ನಿ, ವಾಯು,ಇಂದ್ರ, ಸೋಮ, ಆದಿತ್ಯ, ಸವಿತ, ಇತ್ಯಾದಿ ಈ ಎಲ್ಲವೂ ಭಗವಂತನ ಹೆಸರುಗಳು. ಮನುಷ್ಯರಿಗೆ ಅನೇಕ ಹೆಸರುಗಳನ್ನು ಇಡಲಾಗುತ್ತದೆ ಅವು ಕೂಡ ದೇವರ ಹೆಸರೆ. ಎಷ್ಟೆಲ್ಲಾ ಶಬ್ದಗಳಿವೆಯೋ ಅವುಗಳ ಅಂತಿಮ ಅರ್ಥ ಕೂಡ ಭಗವಂತ ಎಂದೆ. ಬೇರೆ ಬೇರೆ ರೀತಿಯಲ್ಲಿ ಭಗವಂತನ ಪ್ರಾರ್ಥನೆ ಮಾಡುತ್ತೇವೆ. ಕೆಲವರು "ಹೇ ಭಗವಂತ! ನೀನು ತಂದೆ" ಎಂದು ಹೇಳಿದರೆ ಇನ್ನು ಕೆಲವರು "ನೀನು ಮನೆ" ಎಂದು ಹೇಳುತ್ತಾರೆ. "ವೇದದಲ್ಲಿ ಹೀಗೆ ಬಂದಿದೆ, "ನೀನು ನನ್ನ ಹಾಸಿಗೆ". "ಜೀರ್ಣ ಹೊಂದಿದ ಮನುಷ್ಯನಿಗೆ ಹೇಗೆ ಬಟ್ಟೆ ಪ್ರಿಯವಾಗುತ್ತದೊ ಹಾಗೆಯೇ ನೀನು ನನಗೆ ಪ್ರಿಯ." ಇನ್ನು ಕೆಲವರು ಹೇಳುತ್ತಾರೆ. "ಹೇ ಭಗವಂತ, ನೀನು ನನ್ನ ಜೀವನ. ನನಗೆ ಬಾಯಾರಿಕೆ ಆಗಿದೆ." ಅಂದರೆ ನನ್ನ ಮಟ್ಟಿಗೆ ಭಗವಂತ ನೀರು ಆದ! ಬೇಸಿಗೆ ಕಾಲದಲ್ಲಿ ಹೀಗೆ ಹೇಳಬಹುದು, "ಭಗವಂತ, ನೀನು ನನ್ನ ಬೀಸಣಿಗೆ!" ಇದರ ಅರ್ಥ, ಏನೆಲ್ಲ ಶಬ್ದಗಳಿವಿಯೊ ಅವೆಲ್ಲವೂ ಕೊನೆಯಲ್ಲಿ ಭಗವಂತನದೆ ಎಂಬ ಅರ್ಥದಲ್ಲಿವೆ. ಭಗವಂತನಿಗನ್ವಯಿಸದಿರುವಂಥ ಶಬ್ದ ಯಾವುದಿದೆ? ಆದ್ದರಿಂದ ಶಬ್ದಗಳೆಲ್ಲವೂ ಭಗವತ್‌ವಾಚಕವಾಗಿವೆಯೆಂದು ವೈದಿಕ ಪದ್ಧತಿಯಲ್ಲಿ ಹೇಳಲಾಗಿದೆ. ಅದು ಪರಮಾತ್ಮನ ಹೆಸರಿನ ಒಂದು ಉದ್ದನೆಯ ಮಾಲೆ. ಪ್ರತಿಯೊಂದು ಶಬ್ದಕ್ಕೆ ತನ್ನದೆ ಮೂಲ ಅರ್ಥವಂತೂ

ಇದ್ದೇ ಇದೆ. ಆದರೆ ಅದರ ಇನ್ನೊಂದು ಅರ್ಥ ಭಗವಂತ. ವೇದಗಳಿಗಂತೂ ಭಗವಂತನ ಮನನವಲ್ಲದೆ ಬೇರೆ ಯಾವ ರುಚಿಯೂ ಇಲ್ಲ–**ಸರ್ವೆ ವೇದ ಯತ್ ಪದಮಮನಂತಿ** (ಅಷ್ವ.ಕಠ.೩೯)

ಒಟ್ಟಾರೆ ವೇದದ ಅರ್ಥ ಇಷ್ಟೇ ಸ್ವತಃ ಪರ್ಯಾಯವನ್ನು ಹೇಳುತ್ತ ತಾನೆ ಸ್ವತಃ ಅದರ ನಿರಸನವನ್ನೂ ಮಾಡುತ್ತದೆ. ಉಪಾಸನೆಗಾಗಿ ಭಗವಂತನ ಪರ್ಯಾಯವೊಂದನ್ನು ನಿರ್ಮಿಸಿ ಅದನ್ನು ನಿರಸನಗೊಳಿಸು ಎಂದು ಹೇಳುತ್ತದೆ.

ಬಾಲ್ಯದಲ್ಲಿ ನನಗೆ ಒಂದು ಮಾತಿನಿಂದ ಬಹು ದುಃಖವಾಗುತ್ತಿತ್ತು. ನನ್ನ ತಾತನವರು ಗಣೇಶನ ಗಂಧದ ಮೂರ್ತಿಯನ್ನು ಮಾಡುತ್ತಿದ್ದರು. ನಾನು ಚಿಕ್ಕ ಹುಡುಗನಾಗಿದ್ದೆ. ಆದ್ದರಿಂದ ಗಂಧವನ್ನು ತೇಯುವುದಕ್ಕಾಗಿ ನನಗೇ ಹೇಳುತ್ತಿದ್ದರು. ಸಾಕಷ್ಟು ಗಂಧವನ್ನುಜ್ಜಿದ ನಂತರ ಗಂಧದ ಮೂರ್ತಿ ಸಿದ್ಧವಾಗಿರುತ್ತಿತ್ತು. ನಂತರ ಹದಿನಾಲ್ಕು ದಿನ ಅದರ ಪೂಜೆ ನಡೆಯುತ್ತಿತ್ತು. ಕೊನೆಯಲ್ಲಿ ಅದರ ವಿಸರ್ಜನೆಯಾಗುತ್ತಿತ್ತು. ನನಗೆ ಅದರಿಂದಾಗಿ ಬಹಳ ದುಃಖವಾಗುತ್ತಿತ್ತು. ಇಷ್ಟೊಂದು ಕಷ್ಟದಿಂದ ಗಂಧತೇಯ್ದು ಮೂರ್ತಿ ಮಾಡಿದರೂ, ಹದಿನಾಲ್ಕು ದಿನ ಪೂಜೆ–ಉಪಾಸನೆ ಮಾಡಿದರೂ ಕೊನೆಯಲ್ಲಿ ಅದನ್ನು ಮುಳುಗಿಸಿದರು! ಇದನ್ನು ಆವಾಹನೆ ಮತ್ತು ವಿಸರ್ಜನೆ ಎನ್ನುತ್ತಾರೆ. ಇಲ್ಲಿ ತಿಳಿಯಬೇಕಾದ ಮಾತೇನೆಂದರೆ ಈ ರೀತಿ ಮಾಡದೆ ಹೋದರೆ ಮೂರ್ತಿಯೆ ದೇವರಾಗಿ ಬಿಡುತ್ತದೆ. ದೇವರ ಮೂಲ ಸ್ವರೂಪ ಮರೆತು ಹೋಗುತ್ತದೆ. ಮೂರ್ತಿಯೇ ದೇವರೆಂಬ ಭ್ರಮೆ ಉಳಿಯಬಾರದೆಂಬ ಕಾರಣದಿಂದ ಮೂರ್ತಿಯನ್ನು ಕೊನೆಯಲ್ಲಿ ಮುಳುಗಿಸಲಾಗುತ್ತದೆ. ನೀವು ಉಪಾಸನೆ ಮಾಡಿದ್ದರಿಂದ ಅದರ ಬಗ್ಗೆ ನಿಮಗೆ ಆಸಕ್ತಿವುಂಟಾಯಿತು. ಆದ್ದರಿಂದ ಈಗ ಅದನ್ನು ಬಿಟ್ಟು ಬಿಡು ಎಂಬುದಾಗಿ ವೇದ ಹೇಳುತ್ತದೆ. ವೇದ ಈ ಎಲ್ಲ ಗೊಂದಲವನ್ನು ಏಕೆ ಮೂಡಿಸುತ್ತದೆ. ಎಂದು ಕೇಳಬಹುದು. ಇದನ್ನು ತಿಳಿಯುವುದಕ್ಕಾಗಿ ಕೊನೆಯಲ್ಲಿ ನಾವು ಭಗವಂತನ ಬಳಿ ತಲುಪುವ ಪ್ರಯತ್ನ ಮಾಡಬೇಕು. ಇವೆಲ್ಲವೂ ಮೆಟ್ಟಿಲುಗಳಾಗಿವೆ. ಸಂಸ್ಕೃತದಲ್ಲಿ ಇದಕ್ಕೆ 'ಸ್ಥೂಲ–ಅರುಂಧತಿ–ನ್ಯಾಯ' ಎಂದೆನ್ನುತ್ತಾರೆ. ಆಕಾಶದಲ್ಲಿ ಅರುಂಧತಿಯ ದರ್ಶನ ಮಾಡಿಸುವ ಸಮಯದಲ್ಲಿ ಮೊದಲು ಸಪ್ತ ಋಷಿಗಳ ನಕ್ಷತ್ರಗಳನ್ನು ತೋರಿಸಲಾಗುತ್ತದೆ. ನಂತರ ಅವುಗಳಲ್ಲಿ ಒಂದು ದೊಡ್ಡ ನಕ್ಷತ್ರವನ್ನು ತೋರಿಸುತ್ತಾರೆ. ಆ ನಕ್ಷತ್ರದ ಹತ್ತಿರ ನಾಜೂಕಾದ ಚಿಕ್ಕ ತಾರಿಕೆ ಇರುವುದೇ ಅರುಂಧತಿಯೆಂದು ಹೇಳುತ್ತಾರೆ. ಅರುಂಧತಿಯ ಹೆಸರಿನಲ್ಲಿ ಒಂದೊಂದು ನಕ್ಷತ್ರವನ್ನೂ ತೋರಿಸುತ್ತ ಮೊದಲು ತೋರಿಸಿದ ನಕ್ಷತ್ರವನ್ನು ನಿರಸನಗೊಳಿಸುತ್ತಾ ಹೋಗುತ್ತಾರೆ. ಇದೇ ಪದ್ಧತಿ ವೇದದ್ದಾಗಿದೆ. ಮಕ್ಕಳಗೆ ಕಲಿಸುವುದಕ್ಕೆ ಇದು ಒಂದು ಅದ್ಭುತ ಪದ್ಧತಿ.

ಇಂದ್ರನ ರೂಪ ಹೇಗಿದೆ ಎಂಬ ಬಗ್ಗೆ ಒಂದು ಚರ್ಚೆ ನಡೆಯಿತು. ಆಗ 'ಇಂದರ' ಇದೇ ಇಂದ್ರನ ರೂಪ ಎಂದು ಹೇಳಲಾಯಿತು. ಅಗ್ನಿಯ ರೂಪ ಹೇಗಿದೆ? 'ಅಗ್ನಿ'. ಇದು ಒಂದು ಪ್ರಕಾರದ ಉಪಾಸನೆ. 'ಹಾಲು ಕೊಡಿ' ಎಂದು ಬರೆದು ಒಂದು ಕಾಗದವನ್ನು ನಿಮ್ಮ ಬಳಿ ಯಾರೋ ಒಬ್ಬರು ಕಳುಹಿಸಿದಾಗ, ನೀವು ಆ ಪತ್ರವನ್ನು ಓದಿ

ಅದರ ಮೇಲೆ 'ಹಾಲು' ಎಂಬ ಅಕ್ಷರ ಬರೆದು ಉತ್ತರ ಕಳುಹಿಸಿದರೆ ಅದರಿಂದ ಕೆಲಸವಾದಂತಾಯಿತೆ? ಇಲ್ಲಿ ಪತ್ರವನ್ನು ಓದಿ ನೀವು ಹಾಲನ್ನು ಕೊಡುತ್ತೀರಿ 'ಹಾಲು' ಎಂಬ ಅಕ್ಷರಗಳಿಂದ ನೀವು 'ಆಕಳ ಹಾಲು' ಎಂದು ತಿಳಿಯುವಿರಿ. ಇದರ ಅರ್ಥ ಹಾಲು ಎಂಬ ಅಕ್ಷರ ನಿಮ್ಮ ಉಪಾಸನೆಯಾಯಿತು. ಇದೇ ರೀತಿ ಇಡೀ ಶಿಕ್ಷಣ ನಡೆಯುತ್ತದೆ. ಸಾಹಿತ್ಯವೆಂಬುದು ಕೂಡ ಉಪಾಸನೆ. ಇದರ ಅರ್ಥ ಮಿಥ್ಯಾಕ್ಷರಗಳ ಮೇಲೆ ಯಥಾರ್ಥತೆಯ ಕಲ್ಪನೆಯನ್ನು ಮಾಡುವುದು. ಹಾ ಲುನಿಂದ ಹಾಲು ಎಂದು ತಿಳಿಯುವುದು. ಆದರೆ ಇಂಗ್ಲೀಷ್ ಭಾಷೆ ತಿಳಿದವನು ಹಾಲು ಅಕ್ಷರದಿಂದ ಏನನ್ನೂ ತಿಳಿಯಲಾರ. ಅವನಿಗೆ ಮಿಲ್ಕ್ ಎಂದು ಹೇಳಬೇಕಾಗುವುದು. ಯಾರೋ ಒಬ್ಬರು "ನನಗೆ ಸಾಲಿಗ್ರಾಮ ಬೇಕು" ಎಂದೆನ್ನುತ್ತಾರೆ. ಇನ್ನು ಯಾರೊ "ನನಗೆ ಶಿವಲಿಂಗ ಬೇಕು" ಎಂದೆನ್ನುತ್ತಾರೆ. ಒಬ್ಬನಿಗೆ ಸಾಲಿಗ್ರಾಮ ಸಿಗುತ್ತದೆ ಇನ್ನೊಬ್ಬನಿಗೆ ಶಿವಲಿಂಗ ದೊರೆಯುತ್ತದೆ ಆಗಲೆ ಅವನು ಅದರ ಮೇಲೆ ಭಾವನೆಯನ್ನು ಹಾಕಿ ಪಡೆಯುತ್ತಾನೆ ಯಾವ ರೀತಿ ಹಾಲು ಮತ್ತು ಮಿಲ್ಕ್ ಇವೆರಡು ಅಕ್ಷರಗಳು ಭಿನ್ನವಾಗಿದ್ದರೂ ವಸ್ತುವಿನಲ್ಲಿ ವ್ಯತ್ಯಾಸವಿಲ್ಲವೊ ಅದೇ ರೀತಿ "ಸಾಲಿಗ್ರಾಮ", "ಶಿವಲಿಂಗ" ಭಿನ್ನವಾಗಿದ್ದರೂ ಕೂಡ ಮೂಲವಸ್ತುವಿನಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಭಗವಂತನ ಉಪಾಸನೆಯ ಅರ್ಥವು ಇದೇ ಆಗಿದೆ. ಪ್ರಾರಂಭದಲ್ಲಿ ಆಧಾರ ತೆಗೆದುಕೊಂಡು, ಉಪಾಸನೆ ಮಾಡಿದನಂತರ ಅದನ್ನು ಕೂಡ ಬಿಡಬೇಕು.

ಭಾಗವತದಲ್ಲಿ **ಏತಾವಾನ್ ಸರ್ವವೇದಾರ್ಥಾಃ** ಇದೇ ಸರ್ವವೇದಗಳ ಅರ್ಥವೆಂದು ಹೇಳಲಾಗಿದೆ. ಪ್ರಾರಂಭದಲ್ಲಿ ಭಗವಂತನ ಭೇದ ರೂಪವೇನಿದೆ ಅದರ ಆಧಾರವನ್ನು ತೆಗೆದುಕೊಂಡು **ಬಿದಾಂ ಆಸ್ತಾಯ** ಎಂದು ಹೇಳಿ ವೇದ ಅದನ್ನೇ ನಿಷೇಧಿಸುತ್ತದೆ. ಮೊದಲು ಹಿಡಿಯ ಹಚ್ಚುತ್ತದೆ ನಂತರ ಅನುವಾದ ಮಾಡುತ್ತದೆ. ಆದಾದ ನಂತರ ನಿಷೇಧ ಮಾಡುತ್ತದೆ. ಅಂತ್ಯದಲ್ಲಿ ಸ್ವಯಂ ವೇದವೇ ಮುಕ್ತಾಯಗೊಳ್ಳುತ್ತದೆ. ಕೊನೆಯಲ್ಲಿ ನನ್ನ ತ್ಯಾಗ ಮಾಡು ಎಂದು ವೇದ ಹೇಳುತ್ತದೆ. ನಾರದರಿಂದ ಸನ್ಯಾಸದ ವರ್ಣನೆ ಮಾಡಿಸುತ್ತ **ವೇದಾನ್ ಅಫಿ ಸನ್ಯಾಸ್ತಿ** (ವೇದಗಳನ್ನು ಕೂಡ ಬಿಟ್ಟು ಬಿಡುತ್ತಾನೆ) ಎಂದು ಹೇಳಿದೆ.

ಈ ರೀತಿ ವೇದ ನಮ್ಮಿಂದ ಬಹು ಕಠೋರ ಕೆಲಸವನ್ನು ಮಾಡಿಸುತ್ತದೆ. ಯಾವುದನ್ನು ನಾವು ಮೊದಲು ಹಿಡಿದಿದ್ದೆವೊ ಯಾವುದನ್ನು ಕುರಿತು ಉಪಾಸನೆ ಮಾಡಿದ್ದೆವೋ, ಕಾಪಾಡಿದ್ದೆವೊ ಪೋಷಿಸಿದ್ದೆವೊ ಅಂತ್ಯದಲ್ಲಿ ಅದನ್ನೇ ಬಿಟ್ಟುಬಿಡಲು ಹೇಳುತ್ತದೆ. ಒಂದು ವೇಳೆ ನಿಮ್ಮದು ಆ ರೀತಿಯ ಸಿದ್ಧತೆಯಿಲ್ಲದೆ ನೀವು ಕೇವಲ ಮೊದಲೆ ಆಜ್ಞೆಯನ್ನು ಒಪ್ಪಿಕೊಂಡರೆ ನೀವು ಆಜ್ಞಾಪಾಲಕರೆಂದು ಸಿದ್ಧವಾಗುವುದಿಲ್ಲ. ವೇದ ಅಂತಿಮವಾಗಿ ಅನಾಸಕ್ತಿಯ ಮಾತನ್ನು ಹೇಳುತ್ತದೆ. ಅಂತ್ಯದಲ್ಲಿ ಅನಾಸಕ್ತಿ ಸಿದ್ಧಿಸಿದರೆ ಪರಮಾತ್ಮನ ಪ್ರಾಪ್ತಿಯಾಗುತ್ತದೆ. ವೇದ ಮೊದಲು ಗೃಹಸ್ಥಾಶ್ರಮದ ಆಜ್ಞೆ ಕೊಡುತ್ತದೆ ಗೃಹಸ್ಥಾಶ್ರಮವನ್ನು ಆಚರಿಸುವಂತೆ ಮಾಡುತ್ತದೆ, "ನಂತರ ಹೇಳುತ್ತದೆ ಈಗ ನಿನ್ನ ಮಗ ದೊಡ್ಡವನಾದ, ಅವನ ಮೇಲೆ ಎಲ್ಲ ಭಾರವನ್ನೂ ಹಾಕಿ ನೀನು ಪರಿಚರ್ಯ

ಮಾಡು". ಗೃಹಸ್ಥನಿಗೆ ವಾನಪ್ರಸ್ಥಾಶ್ರಮದ ಆಜ್ಞೆಯನ್ನು ಕೊಡುತ್ತದೆ ಮತ್ತು ಅಂತ್ಯದಲ್ಲಿ ಎಲ್ಲವನ್ನೂ ಬಿಡಬೇಕೆಂಬ ಮಾತನ್ನು ಹೇಳುತ್ತದೆ. ಸನ್ಯಾಸದ ಆಜ್ಞೆಯನ್ನು ಕೊಡುತ್ತದೆ. ಈ ರೀತಿ ವೇದ ಒಂದೊಂದು ವಿಷಯವನ್ನು ಹಿಡಿಯಲು ಹೇಳುತ್ತಾ ನಂತರ ಎಲ್ಲವನ್ನೂ ಬಿಡಲು ಹೇಳುತ್ತದೆ. ಕೊನೆಯವರೆಗೂ ನೀವು ವೇದದ ಆಜ್ಞೆಯನ್ನು ಪಾಲಿಸಬೇಕೆಂದೆನೂ ವೇದ ಹೇಳುವುದಿಲ್ಲ. ನೀವೆ ಸ್ವಯಂ ವೇದವಾಗಬೇಕೆಂದೂ ಅದು ಹೇಳುತ್ತದೆ.

ವೇದವನ್ನೊದಿದ ನಂತರ ನಿರ್ವೇದದ ಹಂತ ಬರುತ್ತದೆ. ಗ್ರಂಥದಿಂದಲೇ ಮುಕ್ತವಾಗಬೇಕಿದೆ. ಆದರೆ ಆರಂಭದಲ್ಲಿ ಗ್ರಂಥ ಅಗತ್ಯ. ಅನಂತರ ಗ್ರಂಥವನ್ನು ದಾಟುವಿರಿ. ವೇದವನ್ನೊದಿ, ಜೀರ್ಣಿಸಿಕೊಂಡು **ವೇದಾನ್ ಅಫಿ ಸನ್ಯಾಸ್ತಿ.** ಎಲ್ಲಿಯವರೆಗೆ ಯಾವುದಾದರೊಂದು ಗ್ರಂಥದ ಭಾರವಿರುವುದೊ ಅಲ್ಲಿಯವರೆಗೆ ಸನ್ಯಾಸವಾಗುವುದಿಲ್ಲ. ವಿಧಿ ಪೂರ್ವಕ ಸನ್ಯಾಸ! ಇದು ವೇದದಲ್ಲಿ ಬರುತ್ತದೆ. ವೈದಿಕ ಧರ್ಮದಲ್ಲಿರುವ ಈ ವಿಷಯ ಇನ್ನಾವ ಧರ್ಮದಲ್ಲಿಯೂ ಇಲ್ಲ. **ವೇದೊ ನಿತ್ಯಂ ಅಧಿಯಾತಂ** ಹೀಗೆಂದು ಶಂಕರಾಚಾರ್ಯರು ಆಜ್ಞೆ ಮಾಡಿದ್ದಾರೆ. ವೇದವನ್ನು ನಿತ್ಯ ಅಭ್ಯಸಿಸಬೇಕು. ಹೀಗೆಂದು ಯಾವುದರ ಬಗ್ಗೆ ಅವರು ಹೇಳಿದರೊ ಆ ವೇದವನ್ನೇ ಕೊನೆಯಲ್ಲಿ ತ್ಯಾಗ ಮಾಡಬೇಕೆಂದು ಹೇಳಿದರು. ವೇದದ ತ್ಯಾಗ ಹೇಗೆ ಆಗುತ್ತದೆ? ಆಗ ಹೇಳಿದರು "ನಿಷ್ಠಾವಂತನಾದ ವ್ಯಕ್ತಿ ವೇದವನ್ನು ನಿಷ್ಠೆಯಿಂದ ಓದುವನು". ಇಂಥ ವ್ಯಕ್ತಿಯನ್ನು ಹುಡುಕಿ ಅವನಿಗೆ ವೇದವನ್ನು ಕೊಟ್ಟು ಬಿಡು. ಇಂಥ ಅಧಿಕಾರಿ ವ್ಯಕ್ತಿ ದೊರೆಯದಿದ್ದಲ್ಲಿ ವೇದವನ್ನು ಗಂಗಾಜಲದಲ್ಲಿ ಸಮರ್ಪಣೆ ಮಾಡಿಬಿಡು. ಬೃಹದಾರಣ್ಯಕದಲ್ಲಿ ಒಂದೆಡೆ ಹೀಗೆ ಹೇಳಲಾಗಿದೆ ಪಿತಾ ಅಪಿತಾಭವತಿ. ಮಾತಾ ಅಮಾತಾ. ಲೋಕ ಅಲೋಕಾಃ. ದೇವ ಅದೇವಾಃ ವೇದ ಅವೇದಾಃ. ವೇದವು ಮಾತಾ ಪಿತರ ಸ್ಥಾನದಂಲ್ಲಿದೆ. ಆದರೆ ಮಾತೃಭಕ್ತಿ, ಪಿತೃಭಕ್ತಿಯೂ ಗೌಣವಾಗುವಂತಹ ಒಂದು ಭೂಮಿಕೆಯೊಂದು ಇರುತ್ತದೆ. ಅಲ್ಲಿ ವೇದದ ಸ್ಥಾನ ಕೂಡ ಗೌಣವಾಗಿ ಬಿಡುತ್ತದೆ. ಅಂಥ ವೇದದ ಪರಿತ್ಯಾಗವಾಗುವುದು. ಆ ತ್ಯಾಗ ಎಷ್ಟೊಂದು ಆದರ ಪೂರ್ವಕವಾಗಿ ಆಗುವುದು! ವೇಧವನ್ನು ಒಪ್ಪಲೇಬೇಕು ಎಂದು ಹೇಳುತ್ತಲೇ ಅದರ ಜೊತೆಜೊತೆಯಲ್ಲಿಯೆ ವೇದವನ್ನು ತಲೆಯ ಮೇಲೆ ಇರಿಸಿಕೊಳ್ಳುವುದಕ್ಕೆ ನಾವು ಬದ್ಧರಲ್ಲ ಎಂದು ಹೇಳಿದಾಗ ಅದರ ಅರ್ಥವೇನು? ವೇದಗಳು ಮತ್ತು ಇತರ ಧರ್ಮಶಾಸ್ತ್ರಗಳು ಕೆಲ ಮಿನಿಮಂ ಅಂದರೆ ಅತಿ ಕಡಿಮೆ ನೀತಿಯನ್ನು ಕಲಿಸಿದೆ. ಅದಕ್ಕಿಂತಲೂ ಕೆಳಗೆ ಬೀಳುವುದಕ್ಕೆ ನಿಮಗೆ ಅಧಿಕಾರವಿಲ್ಲ. ಅದಕ್ಕಿಂತ ಮೇಲೆ ಹತ್ತುವ ಅಧಿಕಾರವಿದೆ. ಮೇಲೆರಲು ಆ ಪುಸ್ತಕಗಳನ್ನು ಗುಡಿಸಿ ಎಸೆದುಬಿಡಬೇಕಾಗುತ್ತದೆ. ಕೇವಲ ಎಸೆದು ಬಿಡಬೇಕಾಗುತ್ತದೆ ಎಂದಷ್ಟೇ ಅಲ್ಲ ಎಸೆಯುವ ಹಕ್ಕೂ ಇದೆ. ಆ ಪುಸ್ತಕಗಳೇ ಈ ಮಾತನ್ನು ಹೇಳುತ್ತವೆ. **ಫಲಾಲಮಿವ ಧಾನ್ಯಾರ್ಥಿ ತ್ಯಜೆತ್ ಗ್ರಂಥಂ ಅಶೇಷತಃ** (ಯಾವ ರೀತಿ ಧಾನ್ಯಾರ್ಥಿ ತೌಡನ್ನೂ, ಸಿಪ್ಪೆಯನ್ನೂ ಎಸೆಯುತ್ತಾನೊ ಅದೇ ರೀತಿ ಸಾರವನ್ನು ಗ್ರಹಣ ಮಾಡಿಕೊಂಡು ಗ್ರಂಥವನ್ನು ಪೂರ್ಣವಾಗಿ ಬಿಟ್ಟುಬಿಡಬೇಕು) ಆದ್ದರಿಂದ ಒಂದೆಡೆ ನಾವು ಅದನ್ನು ಒಪ್ಪಿಕೊಳ್ಳಬೇಕು ಎಂದು ಹೇಳಿದರೆ ಅವುಗಳನ್ನು ಕಟ್ಟಿಕೊಳ್ಳಬೇಡಿ ಎಂದೂ ಹೇಳುತ್ತೇವೆ.

ಯಜ್ಞ+ತಪ+ದಾನ

ಯಾವುದಾದರೊಂದು ಪ್ರತ್ಯಕ್ಷ ಕರ್ಮ ಮಾಡಬೇಕು ಯಾವುದಾದರೊಂದನ್ನು ಉತ್ಪಾದಿಸಬೇಕು, ಅದಕ್ಕಾಗಿ ಏನನ್ನಾದರೂ ತಪ್ಪಿಸಬೇಕು ಎಂಬುದು ಯಜ್ಞದ ಅರ್ಥವೆಂಬುದಾಗಿ ವೇದದಲ್ಲಿ ಹೇಳಿದೆ. ಆ ತಪದಿಂದ ಏನು ಹುಟ್ಟುತ್ತದೊ ಅದನ್ನು ಭಗವಂತನಿಗೆ ಅರ್ಪಿಸಬೇಕು. ಈ ಪ್ರಕಾರ ವೇದ ಹೇಳಿದ ಯಜ್ಞದಲ್ಲಿ ತಪ, ದಾನ ಮತ್ತು ಆಹುತಿ ಈ ಮೂರರ ಸಮಾವೇಶವಾಗುತ್ತದೆ. ಪರಿಶ್ರಮದಿಂದ ತಪ; ಕೊಡುವುದರಿಂದ ದಾನ ಮತ್ತು ಉರಿಸುವುದರಿಂದ ಯಜ್ಞ, ಈ ಮೂರೂ ಸೇರಿದಾಗ ಹವನ. ರೈತ ಪ್ರಖರ ಬಿಸಿಲಿನಲ್ಲಿ ಹೊಲದಲ್ಲಿ ಕೆಲಸ ಮಾಡಿದಾಗ ಅವನ ಶರೀರದ ಬೊಜ್ಜು ಸುಡುತ್ತದೆ. ಬೊಜ್ಜು ಹೆಚ್ಚಾದಾಗ ಶಾರೀರಿಕ ದೋಷಗಳು ಉಂಟಾಗುತ್ತವಷ್ಟೇ ಅಲ್ಲ ಮಾನಸಿಕ ವಿಕಾರ ಕೂಡ ಉಂಟಾಗುತ್ತದೆ. ಶರೀರ ಶ್ರಮದಿಂದ ಬೊಜ್ಜು ಸುಡುತ್ತದೆ. ಈ ಪ್ರಕಾರ ಬೊಜ್ಜಿನ ಸುಡುವಿಕೆಯಿಂದ ಅಂದರೆ ಯಜ್ಞದ ಆಹುತಿಯಿಂದ ಶರೀರ ಮತ್ತು ಮನಸ್ಸು ಎರಡೂ ಶುದ್ಧವಾಗುತ್ತವೆ. ಸಾರಾಂಶ, ಶ್ರಮ ಮಾಡಿ ಅನ್ನವನ್ನು ಉತ್ಪಾದಿಸುವ ಈ ಪರಿಶ್ರಮದ ಮೂಲಕ ಶರೀರದ ಬೊಜ್ಜನ್ನು ಸುಡುವುದು ಮತ್ತು ಉತ್ಪಾದಿತವಾದುದನ್ನು ಸಮಾಜಕ್ಕೆ ಅಂದರೆ ಈಶ್ವರನಿಗೆ ಅರ್ಪಣ ಮಾಡುವುದು ಈ ಪ್ರಕಾರ ಯಜ್ಞ-ದಾನ-ತಪ ಮೂರೂ ಸೇರಿ ಪೂರ್ಣವಾಗುತ್ತದೆ ಯಜ್ಞ.

ಮನುಷ್ಯನ ಆದ್ಯ ಕರ್ತವ್ಯ ಯಜ್ಞ ಆದ್ದರಿಂದ ಪ್ರಕಾಶ ಮತ್ತು ಪ್ರಭಾವ ದೊರೆಯುತ್ತದೆ. ಸಮಾಜದಲ್ಲಿ ಧರ್ಮ ಅನೇಕ ಪ್ರಕಾರದ್ದಿವೆ. ತಾಯಿಯ ಧರ್ಮ, ಮಗನಧರ್ಮ, ಗುರುವಿನ ಧರ್ಮ, ವಿದ್ಯಾರ್ಥಿಯ ಧರ್ಮ, ರಾಷ್ಟ್ರದ ಧರ್ಮ ಹೀಗೆ ಬೇರೆ ಬೇರೆ ಧರ್ಮಗಳವೆ. ಆದರೆ ಈ ಎಲ್ಲ ಧರ್ಮಗಳಿಗಿಂತ ಪ್ರಥಮ ಧರ್ಮ ಯಜ್ಞವೆಂದು ವೇದಗಳು ಹೇಳಿವೆ. ಉಳಿದೆಲ್ಲ ಧರ್ಮಗಳು ಯಜ್ಞದ ನಂತರ ಬರುತ್ತವೆ. ಎಲ್ಲರಿಗಾಗಿ ಸಾಧಾರಣ, ಸಮಾನವಾದ ಒಂದು ಧರ್ಮವಿದೆ ಅದುವೆ ಯಜ್ಞ, ಪ್ರತಿಯೊಬ್ಬ ಮನುಷ್ಯನ ಧರ್ಮವೂ ಬೇರೆಯಾಗಿರುತ್ತದೆ. ನಾನು ಯಾವ ಉಪಾದಿಯಲ್ಲಿದ್ದೇನೆಯೊ ಅದಕ್ಕನುಸಾರವಾಗಿ ನನ್ನ ಧರ್ಮ ಉಂಟಾಗುತ್ತದೆ. ಉದಾಹರಣೆಗೆ ಸನ್ಯಾಸಿ ಮತ್ತು ಬ್ರಹ್ಮಾಚಾರಿ. ಇವರಿಬ್ಬರ ಧರ್ಮ ಬೇರೆ. ನನ್ನ ಅರ್ಥದಲ್ಲಿ ಬ್ರಹ್ಮಚಾರಿ ಎಂದರೆ ಬ್ರಹ್ಮಚರ್ಯಾಶ್ರಮ. ಒಂದರ್ಥದಲ್ಲಿ ಸನ್ಯಾಸಿ ಕೂಡ ಬ್ರಹ್ಮಚಾರಿಯೆ. ಮನುಷ್ಯನ ಬಾಲ್ಯಾವಸ್ಥೆ ಅಂದರೆ ಆಯುಷ್ಯದ ಮೊದಲ ೨೫ ವರ್ಷದ ಆಶ್ರಮ ಬ್ರಹ್ಮಚರ್ಯಾಶ್ರಮ ಎಂದು ಭಾವಿಸಲಾಯಿತು. ಆದರೆ ಆ ಬಾಲಕ ಮತ್ತು ಸನ್ಯಾಸಿಯ ಧರ್ಮ ಬೇರೆ. ಬಾಲಕನ ಧರ್ಮ ಅವನು ಹೇಳುವಂತೆ "ನನ್ನ ಬಾಹುಗಳಲ್ಲಿ ಬಲ ಹೆಚ್ಚಾಗಲಿ ನನ್ನ ಶರೀರ ತೇಜಸ್ವಿಯಾಗಲಿ" ಎಂಬುದಾಗಿರುತ್ತದೆ. ಆದರೆ ಸನ್ಯಾಸಿ ಹೇಳುವಂತೆ "ನನ್ನ ಬಾಹುಗಳಲ್ಲಿ ಯಾವ ಬಲವಿದೆಯೊ ಅದು ಭಗವಂತನಿಗೆ ಸಮರ್ಪಿತವಾಗಿದೆ. ನನ್ನದೆಲ್ಲವು ಅವನಿಗೇ ಸಮರ್ಪಿತವಾಗಲಿ. ಹೀಗೆ ಯಾರದು ಯಾವ ಭೂಮಿಕೆ ಇದೆಯೊ ಅವನಿಗೆ ಅದರನುಸಾರ ಧರ್ಮ ಪ್ರಾಪ್ತವಾಗುತ್ತದೆ. ಈ ಭೂಮಿಕೆಯಲ್ಲಿ ಪರಿವರ್ತನೆಯಾದರೆ ಧರ್ಮದಲ್ಲಿ ಕೂಡ ಪರಿವರ್ತನೆಯಾಗುವುದು. ಈ ದೃಷ್ಟಿಯಿಂದ ನಾಲ್ಕು ಆಶ್ರಮಗಳ ವ್ಯವಸ್ಥೆಯಿದೆ. ಮನುಷ್ಯನ

ವೃತ್ತಿಯಲ್ಲಿ ಬದಲಾವಣೆಯಾದಂತೆಲ್ಲ ಅವನ ಆಶ್ರಮವೂ ಬದಲಾಗುತ್ತಾ ಹೋಗುತ್ತದೆ. ಆದರೆ ಈ ಪ್ರಕಾರ ಪ್ರತಿಯೊಬ್ಬರಿಗೂ ಬೇರೆ ಧರ್ಮವಿದ್ದಾಗಲೂ ಎಲ್ಲರಿಗೂ ಒಂದು ಸಮಾನ ಧರ್ಮವಿದೆ. ಅದು ಮಾನವಧರ್ಮ. ಮಾನವಧರ್ಮ ಎಲ್ಲರ ಪ್ರಥಮಧರ್ಮ. ಉದಾಹರಣೆಗೆ, ಒಬ್ಬ ಪ್ರಾಧ್ಯಾಪಕನಿದ್ದಾನೆ, ಮಾನವ ಧರ್ಮ ಅವನ ಪ್ರಥಮ ಧರ್ಮ, ಮೊದಲ ಕರ್ತವ್ಯ. ಓದಿಸುವುದು ಅವನ ಎರಡನೆಯ ಕರ್ತವ್ಯವಾಗುತ್ತದೆ. ಅದೇ ರೀತಿ ಕವಿಯೋರ್ವನಿಗೂ ಮಾನವ ಧರ್ಮ ಪ್ರಥಮ ಕರ್ತವ್ಯವಾಗುತ್ತದೆ. ಕಾವ್ಯ ರಚಿಸುವುದು ಎರಡನೆಯ ಕರ್ತವ್ಯವಾಗುತ್ತದೆ. ಏಕೆಂದರೆ ಪ್ರತಿಯೊಬ್ಬ ಮನುಷ್ಯನಲ್ಲಿ ಅವನ ಪ್ರಥಮ ವೃತ್ತಿ ಮನುಷ್ಯತ್ವವೆ. ಉಳಿದೆಲ್ಲ ವೃತ್ತಿಗಳು ಅಥವಾ ಪ್ರವೃತ್ತಿಗಳು ಆ ಮಾನವಧರ್ಮದ ಪೂರ್ಣತೆಯ ನಂತರ ಬರುತ್ತವೆ. ಈ ಮಾನವ ಸಾಧಾರಣ ಧರ್ಮದ ಹೆಸರೆ ಯಜ್ಞ!

ಯಜ್ಞವೆಂದರೆ ಸಮಾಜದಲ್ಲಿ ಯಾವ ಸಮಯದಲ್ಲಿ ಯಾವ ವಸ್ತುವಿನ ನ್ಯೂನ್ಯತೆಯಿದೆಯೊ ಅದರ ಪೂರ್ತಿಗಾಗಿ ಏನನ್ನಾದರೂ ತ್ಯಾಗ ಮಾಡುವುದು. ಸಮಾಜದಲ್ಲಿ ಮಲಿನತೆ ಉಂಟಾದಾಗ ಸ್ವಚ್ಛತೆ ಮಾಡುವುದು ಯಜ್ಞವಾಗುತ್ತದೆ. ಆ ಕಾರ್ಯದಲ್ಲಿ ಪ್ರತಿಯೊಬ್ಬರೂ ಭಾಗವಹಿಸಬೇಕು. ಅವನು ಬಾದಶಹನೇ ಆಗಿರಬಹುದು ಶಿಕ್ಷಕನೇ ಆಗಿರಬಹುದು, ಕವಿಯೇಆಗಿರಬಹುದು ಅಥವಾ ಗೃಹಪತಿಯೇಆಗಿರಬಹುದು. ಯುಗ-ಯುಗದಲ್ಲಿ ಯಜ್ಞ ಬದಲಾಗುತ್ತದೆ. ಪ್ರತಿಯೊಂದು ಯುಗದಲ್ಲಿ ಪ್ರತ್ಯೇಕವಾದ ಯಜ್ಞವಿರುತ್ತದೆ. ಮೊದಲು ಅರಣ್ಯ ಹೆಚ್ಚಾಗಿತ್ತು ಆ ಕಾಲದಲ್ಲಿ ಅರಣ್ಯವನ್ನು ಕಡಿಯುವುದು ಮತ್ತು ಸುಡುವುದೇ ಯಜ್ಞವಾಗಿತ್ತು. ನಂತರ ಈ ಕೆಲಸವನ್ನೆ ಕೆಲವರು ತಮ್ಮ ಜೀವನದ ಆದರ್ಶ ಮಾಡಿಕೊಂಡಂಥವರು ಹುಟ್ಟಿದರು. ಅವರ ಇಡೀ ಜೀವನ ಆ ಯಜ್ಞಕ್ಕಾಗಿಯೇ ಸಮರ್ಪಿತವಾಯಿತು. ಆ ಕೆಲಸದಲ್ಲಿ ಪ್ರತಿಯೊಬ್ಬರು ಭಾಗವಹಿಸಬೇಕು. ಆದ್ದರಿಂದ ಆ ಸಮಯದಲ್ಲಿ ಅರಣ್ಯ ಕಡಿಯುವ ಕೆಲಸವೆ ಯಜ್ಞವಾಯಿತು. ಶಿಷ್ಯನು ಗುರುವಿನ ಮನೆಗೆ ಬರುತ್ತಲೆ ಅವನಿಗೆ ಅರಣ್ಯದಿಂದ ಸಮಿತ್ತನ್ನು ಕಡಿದುಕೊಂಡು ಬರಲು ಕಲಿಸಲಾಗುತ್ತಿತ್ತು. ಸಮಿತ್ತನ್ನು ಕೈಯಲ್ಲಿ ತೆಗೆದುಕೊಳ್ಳುವುದರ ಅರ್ಥ ವಿದ್ಯಾರ್ಥಿಯು ಅರಣ್ಯವನ್ನು ಕತ್ತರಿಸುವ ಸಾಧಾರಣ ಧರ್ಮದ ಪಾಲನೆಯನ್ನು ಮಾಡಿದ್ದಾನೆ ಮತ್ತು ಈಗ ಅವನ ವಿಶೇಷ ಧರ್ಮವಾದ ವಿದ್ಯಾ ಪ್ರಾಪ್ತಿಗೆ ಧರ್ಮದ ಅಧಿಕಾರಿ ಅವನಾದ. ಅದೇ ರೀತಿ ಗುರು ಕೂಡ ಕೈಯಲ್ಲಿ ಸಮಿತ್ತನ್ನು ತೆಗೆದುಕೊಳ್ಳುತ್ತಿದ್ದ. ಅದರ ಅರ್ಥ ಗುರು ಪ್ರಥಮ ಧರ್ಮವನ್ನು ಪೂರ್ತಿ ಮಾಡಿದ್ದಾನೆ ಮತ್ತು ವಿದ್ಯೆಯನ್ನು ಕೊಡುವ ತನ್ನ ವಿಶೇಷ ಧರ್ಮದ ಸಿದ್ಧತೆ ಮಾಡಿಕೊಂಡಿದ್ದಾನೆ. ಆದರೆ ಯಾವಾಗ ಅನಾವಶ್ಯಕವಾಗಿ ಅರಣ್ಯ ಬಯಲಾಯಿತೊ ಮತ್ತು ಮನುಷ್ಯನ ಗ್ರಾಮಗಳು ಸ್ಥಾಪಿತಗೊಂಡವೊ ಆಗ ಗ್ರಾಮಗಳ ಬಳಿ ಕೆಲವು ಉಪಯೋಗಿ ವೃಕ್ಷಗಳ ಅವಶ್ಯಕತೆ ಗೊತ್ತಾಯಿತು. ಆಗ ಪ್ರತಿಯೊಬ್ಬ ಮನುಷ್ಯ ತನ್ನ ಜೀವಿತಾವಧಿಯಲ್ಲಿ ಅರಳಿ, ಬೇವು ಮುಂತಾದ ಒಂದು ಮರವನ್ನಾದರೂ ನೆಡಬೇಕು ಮತ್ತು ಅದರ ಸಂವರ್ಧನೆ-ಸಂರಕ್ಷಣೆ ಮಾಡಬೇಕೆಂದು ತಿಳಿಯಲಾಯಿತು. ಇದನ್ನೇ ಆ ಸಮಯದ ಯಜ್ಞವೆಂದು ತಿಳಿಯಲಾಯಿತು. ಮುಂದೆ ಆ ಯಜ್ಞದ ಪ್ರತೀಕ ಅಥವಾ ಚಿಹ್ನೆಯ ರೂಪವಾಗಿ ತುಳಸಿಯ ಗಿಡವನ್ನು ನೆಡುವುದು

ಪ್ರಾರಂಭವಾಯಿತು. ಮತ್ತು ಭೋಜನಕ್ಕೆ ಮುಂಚೆ ತುಳಸಿಗೆ ನೀರೆರೆಯುವ ಶಿಕ್ಷಣವನ್ನು ಮನೆಯಲ್ಲಿ ಹುಡುಗನಿಗಾಗಲಿ, ಹುಡುಗಿಗಾಗಲಿ ಕೊಡಲಾಯಿತು. ಈ ರೀತಿ ಸಮಾಜದ ಭಿನ್ನ ಭಿನ್ನ ಪರಿಸ್ಥಿತಿಗಳಲ್ಲಿ ಭಿನ್ನ ಭಿನ್ನವಾದ ಯಜ್ಞಗಳಿರುತ್ತವೆ ಮತ್ತು ಅದರಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಪಾಲನ್ನು ಕೊಡಲೇಬೇಕು. ಯಾವ ಕವಿಯೂ ನಾನು ಕವಿ, ನಾನೇಕೆ ಇದರಲ್ಲಿ ಭಾಗಿಯಾಗಲಿ ಎಂದು ಹೇಳದಿರಲಿ. ಅವನಿಗೆ ನೀನು ಮೊದಲು ಮನುಷ್ಯ, ಆದ್ದರಿಂದ ಮಾನವ ಸಾಧಾರಣ ಧರ್ಮವನ್ನು ಪೂರ್ಣಮಾಡಿದ ನಂತರವೆ ಕವಿಯ ವಿಶೇಷ ಧರ್ಮ ನಿನಗೆ ಪ್ರಾಪ್ತವಾಗುತ್ತದೆ ಮತ್ತು ಆಗಲೆ ನಿನ್ನ ರಚನೆಗಳಲ್ಲಿ ಪ್ರಕಾಶವು ಪ್ರಕಟಗೊಳ್ಳುವುದು. ಇದೇ ಮಾತು ಶಿಕ್ಷಕ, ವ್ಯಾಪಾರಿ ರಾಜಕಾರಣಿ ಎಲ್ಲರಿಗೂ ಅನ್ವಯಿಸುವುದು.

ಐವತ್ತು ವರ್ಷದ ಹಿಂದಿನ ಮಾತು. ಒಂದು ಸಲ ಆರ್ಯ ಸಮಾಜದ ಒಂದು ಯಜ್ಞದಲ್ಲಿ ನಾನು ತಕಲಿಯ ಮೇಲೆ ದಾರ ತೆಗೆಯುತ್ತಿದ್ದೆ. ಅದಕ್ಕೆ ಕಾರಣವಾಗಿ ನಾನು ಹೇಳಿದೆ, "ಭಾರತವು ಯಾವ ಸ್ಥಿತಿಯಲ್ಲಿದೆಯೊ ಅಂಥ ಸ್ಥಿತಿಯಲ್ಲಿ ನೂಲುವುದೇ ಇಂದಿನ ಯಜ್ಞವಾಗುತ್ತದೆ." ವೇದದಲ್ಲಿ ತಂತು ಮತ್ತು ಓತೂ ಶಬ್ದಗಳು ಬರುತ್ತವೆ. ನೆಯ್ಗೆಯ ದೃಷ್ಟಾಂತವನ್ನೆ ಋಷಿಗಳು ತೆಗೆದುಕೊಳ್ಳುತ್ತಿದ್ದರು. ತಂತು ಎಂದರೆ ಹಾಸು ಮತ್ತು ಓತೂ ಎಂದರೆ ಹೊಕ್ಕು. ಇಂದು ತಂತು ಎಂದರೇನು ಮತ್ತು ಹೊಕ್ಕು ಎಂದರೇನು? ಇದನ್ನು ತಿಳಿಸುವ ಹಣೆಬರಹ ಬಂದಿದೆ. ನಮ್ಮ ದೇಶದಲ್ಲಿ ಬಹಳಷ್ಟು ಹತ್ತಿಯ ಉತ್ಪಾದನೆಯಾಗುತ್ತಗೆ ಆದರೆ ಅದರಿಂದ ಬಟ್ಟೆ ಇಲ್ಲಿ ತಯಾರಾಗುವುದಿಲ್ಲ. ಲಂಕಾಷೈರ್‌ನಲ್ಲಿ ೫೦೦ ಮಿಲ್ಲುಗಳಿವೆ ಅವುಗಳಲ್ಲಿ ೪೦೦ ಮಿಲ್ಲುಗಳು ಹಿಂದೂಸ್ಥಾನದ ಬಟ್ಟೆಗಾಗಿವೆ. ನಾವು ಪರಾಧೀನರಾಗಿದ್ದೇವೆ. ಏಕೆಂದರೆ ಯಜ್ಞವನ್ನು ಬಿಟ್ಟಿದ್ದೇವೆ. ಆದ್ದರಿಂದ ನೂಲನ್ನು ತೆಗೆದು ಅದರ ಬಟ್ಟೆ ತಯಾರಿಸುವುದು ಇಂದಿನ ಸಾಧಾರಣ ಧರ್ಮವಾಗಿದೆ.

ನಾವು ವರ್ತಮಾನ ಕಾಲದಲ್ಲಿ ಜೀವಿಸುತ್ತೆವಾದ್ದರಿಂದ ಆ ಧರ್ಮವನ್ನೆ ಆಚರಣೆ ಮಾಡಬೇಕು. ನಮ್ಮ ಮುಂದೇನಿದಿಯೊ ಮತ್ತು ನಮ್ಮ ಕೈಯಲ್ಲೇನಿದಿಯೊ ಅದೇ ಎಲ್ಲಕ್ಕಿಂತ ಹೆಚ್ಚು ಒಳ್ಳೆಯದು. ಯಾವ ಗುರು ನನಗೆ ಸಿಕ್ಕಿದ್ದಾನೊ ಅವನೆ ಎಲ್ಲಕ್ಕಿಂತ ಶ್ರೇಷ್ಠ ಗುರುವೆಂದು ಶಿಷ್ಯರಿಗೆ ಅನಿಸಬೇಕು. ಗುರುವಿಗೂ ಕೂಡ ನನಗೆ ಯಾರು ಸಿಕ್ಕಿದ್ದಾರೊ ಅವರೆ ಎಲ್ಲಕ್ಕಿಂತ ಶ್ರೇಷ್ಠ ಶಿಷ್ಯರೆಂದು ಅನಿಸಬೇಕು. ಒಬ್ಬ ಶಿಕ್ಷಕನಿಗೆ ನಾನು ಕೇಳಿದೆ "ನಿಮ್ಮ ಪಾಠಶಾಲೆ ಹೇಗೆ ನಡೆಯುತ್ತಿದೆ. ಆತ ಉತ್ತರ ಕೊಟ್ಟ ಮಾಮೂಲಿನಂತೆ ನಡೆಯುತ್ತಿದೆ." ಕಾರಣವೇನೆಂದು ಕೇಳಿದೆ ಅದಕ್ಕೆ ಅವನು ಉತ್ತರಿಸಿದ ಎಂಥ ವಿದ್ಯಾರ್ಥಿಗಳು ಸಿಕ್ಕಿದ್ದಾರೆಂದರೆ ಅವರು ಪೂರಾ ಕಲ್ಲಿನಂತಿದ್ದಾರೆ. ನಾನೆಂದೆ ಭೇಷ್ ಶಿಕ್ಷಕ! ಕಲ್ಲು ಸಿಕ್ಕಿದೆಯೆಂದರೆ ಅದರಿಂದ ನೀನು ಮೂರ್ತಿಯನ್ನು ತಯಾರಿಸು, ಮಣ್ಣು ಇದ್ದರೆ ಮಡಿಕೆ ತಯಾರಿಸು ಏನು ಸಿಕ್ಕಿದಿಯೊ ಅದರಿಂದ ಏನು ತಯಾರಾಗುತ್ತದೊ ಅದನ್ನು ಮಾಡು ಅಂದರೆ ನಾವು ಎಲ್ಲಿದ್ದೇವೆಯೊ ಆ ಸ್ಥಾನದ್ದು ಅದೇ ಕಾಲದ್ದು ಮಹತ್ವವಿದೆ. ಅದೇ ಗುಣದ ಶಕ್ತಿಯನ್ನು ಹೆಚ್ಚಿಸಬೇಕಿದೆ. ವೇದಗಳ ಋಷಿಗಳು ಇದೇ ಪ್ರಕಾರ ತಮ್ಮ ಅಕ್ಕಪಕ್ಕದ ದೃಷ್ಟಾಂತವನ್ನು ಕೊಟ್ಟು ವರ್ತಮಾನದ ಮಹತ್ವವನ್ನು ಹೆಚ್ಚಿಸುತ್ತಿದ್ದರು. ಸಾರವಿಷ್ಟೆ ಯಾವುದು ಎದುರಿಗಿದಿಯೊ ಅದೇ ಪ್ರತ್ಯಕ್ಷ ಬ್ರಹ್ಮ. ಅದರ ಉಪಾಸನೆಯೆ ಯಜ್ಞ.

* * *

ಜನಪದ ವ್ಯಕ್ತಿ

ಕತ್ತಿಗಿಂತ ಲೇಖನಿ ಪ್ರಬಲ ಎಂದು ಸಾರುವ ಬೈರಾಗಿ ಪತ್ರಕರ್ತ

– ವಿಶ್ವೇಶ್ವರ ಭಟ್

"ಪ್ರಾಯಶಃ ಬಡತನ ಹಾಗೂ ಬರಗಾಲದ ಬಗ್ಗೆ ಜಗತ್ತಿನಲ್ಲೇ ಅವರಷ್ಟು ತಲಸ್ಪರ್ಶಿ ಅಧ್ಯಯನ ಕೈಗೊಂಡು ವಿಸ್ತೃತವಾಗಿ ವರದಿ ಮಾಡಿದ ಮತ್ತೊಬ್ಬ ಪತ್ರಕರ್ತ ಸಿಗಲಿಕ್ಕಿಲ್ಲ. ಈ ಕ್ಷಣದಲ್ಲಿ ನನಗೆ ಅವರನ್ನು ಬಿಟ್ಟರೆ ಮತ್ಯಾರ ಹೆಸರೂ ನೆನಪಾಗುತ್ತಿಲ್ಲ. ಬಡತನ ಮತ್ತು ಬರಗಾಲದ ಬಗ್ಗೆ ಅವರು ನಾವೆಲ್ಲ ಹೆಮ್ಮೆಪಡುವಂಥ ಪರಿಣತರು. ಒಬ್ಬ ಪತ್ರಕರ್ತರಾಗಿ ಅವರು ಕೈಗೊಂಡ ಈ ಅಧ್ಯಯನವನ್ನು ನಾನು ಮನಸಾರೆ ಮೆಚ್ಚಿಕೊಂಡಿದ್ದೇನೆ."

ಈ ಮಾತನ್ನು ಖ್ಯಾತ ಪತ್ರಕರ್ತ ಪಲಗುಮ್ಮಿ ಸಾಯಿನಾಥ ಕುರಿತು ಹೇಳಿದ್ದು ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನ್.

ವರದಿಗಾರರೆಂದರೆ ನಗರಕೇಂದ್ರಿತವಾಗಿರುತ್ತಾರೆ, ಪತ್ರಿಕಾ ಗೋಷ್ಠಿ, ಕಾರ್ಯಕ್ರಮಗಳನ್ನಷ್ಟೇ ವರದಿ ಮಾಡುತ್ತಾರೆ, ಅಧ್ಯಯನ ಮಾಡದೇ ಬರೆಯುತ್ತಾರೆ, ಅವಸರದ ಸಾಹಿತ್ಯ ಸೃಷ್ಟಿಸುತ್ತಾರೆ, ಕೇವಲ ರಾಜಕೀಯ, ಸಿನಿಮಾ, ಹಣವುಳ್ಳವರ ಬಗ್ಗೆ ಮಾತ್ರ ಬರೆಯುತ್ತಾರೆ... ಹೀಗೆಲ್ಲ ಏನೇನೋ ಆಪಾದನೆಗಳಿದ್ದರೆ, ಅವನ್ನೆಲ್ಲ ಒಂದು ಕ್ಷಣ ಪಕ್ಕಕ್ಕೆ ಇಡಿ. ಈಗ ಆ ಬಗ್ಗೆ ಚರ್ಚಿಸುವುದು ಬೇಡ. ನಿಮಗೊಬ್ಬ ಅಪರೂಪದ, ಆದರ್ಶವೆನಿಸುವಷ್ಟು ಆಪ್ತವಾಗುವ ಪಿ. ಸಾಯಿನಾಥ ಬಗ್ಗೆ ಹೇಳಬೇಕು. ಬಹುಶಃ ನಮ್ಮ ದೇಶದಲ್ಲಿ ಇವರಷ್ಟು ಗ್ರಾಮೀಣ ಪ್ರದೇಶಗಳನ್ನು ಸುತ್ತಿದವರೂ ಯಾರೂ ಇರಲಿಕ್ಕಿಲ್ಲ.

ಏನಿಲ್ಲವೆಂದರೂ ಸುಮಾರು ಒಂದು ಲಕ್ಷ ಕಿ.ಮೀ. ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸಿ, ಹಳ್ಳಿಗಳಲ್ಲಿ ವರ್ಷಗಟ್ಟಲೆ ಉಳಿದು, ಅಲ್ಲಿನ ಸೂಕ್ಷ್ಮ ಒಳನೋಟ, ಸಮಸ್ಯೆಗಳನ್ನು ಸೆರೆಹಿಡಿದು ಪರಿಣಾಮಕಾರಿಯಾಗಿ ವರದಿ ಮಾಡಿದ ಅಸಾಧಾರಣ ಪತ್ರಕರ್ತ. ಸಾಯಿನಾಥ ಅವರದು ಅದೆಂಥ ನಿಷ್ಠೆ ಅಂದರೆ ಸುಮಾರು ಐದು ಸಾವಿರ ಕಿ.ಮೀ. ದೂರವನ್ನು ಕಾಲ್ನಡಿಗೆಯಲ್ಲಿ ಕ್ರಮಿಸಿ ಗ್ರಾಮೀಣ ಭಾರತವನ್ನು ವರದಿ ಮಾಡಿದ್ದಾರೆ. ರೈತರು ಅನುಭವಿಸುತ್ತಿರುವ ನೂರಾರು ಕಷ್ಟಕೋಟಲೆ, ಆತ್ಮಹತ್ಯೆ, ಜೀವನ ವಿಧಾನದಲ್ಲಾದ ಬದಲಾವಣೆ, ಹಳ್ಳಿಗಳ ಮೇಲೆ ಜಾಗತೀಕರಣದ ಪ್ರಭಾವ ಮುಂತಾದ ನೂರಾರು ಸಂಗತಿಗಳ ಬಗ್ಗೆ ಸಾಯಿನಾಥ ಕೈಗೊಂಡ ಅಧ್ಯಯನ ಅತ್ಯುತ್ತಮ ಗ್ರಾಮೀಣ ವರದಿಗಾರಿಕೆಗೆ ನಿದರ್ಶನ. ರೈತರ ಆತ್ಮಹತ್ಯೆ ಬಗ್ಗೆ ಸಾಯಿನಾಥ ವರದಿ ಮಾಡುವವರೆಗೆ ಸಮಸ್ಯೆಯ ತೀವ್ರತೆ ಹಾಗೂ ಅದರ ಸುತ್ತ ಕವಿದ ಅನೇಕ ಅಂಶಗಳ ಗಂಭೀರ ಸ್ವರೂಪ ಗೊತ್ತೇ ಇರಲಿಲ್ಲ.

ಒರಿಸ್ಸಾ, ಬಿಹಾರ, ಮಧ್ಯಪ್ರದೇಶ, ಉತ್ತರ ಪ್ರದೇಶ, ಆಂಧ್ರಪ್ರದೇಶ, ತಮಿಳುನಾಡಿನ ಹಿಂದುಳಿದ ಹಾಗೂ ಕಡುಬಡತನದಲ್ಲಿರುವ ಜಿಲ್ಲೆಗಳನ್ನು ಗುರುತಿಸಿ ಸಾಯಿನಾಥ ಅಲ್ಲಿಯೇ ವಾಸ್ತವ್ಯ ಹೂಡಿ ವರದಿ ಮಾಡಿದರು. ಕೋರಾಪುಟ್, ಕಾಳಹಂದಿಯಂಥ ಊರುಗಳಲ್ಲಿ ಮೈಲಿ ಗಟ್ಟಲೆ ಕ್ರಮಿಸಿ ಅವರೊಂದಿಗೆ ಬೆರೆತು ಜೀವಿಸಿ ಯಾರಿಗೂ ಸಿಗದ ಭಯಾನಕ ಮಾಹಿತಿಯನ್ನು ಹೆಕ್ಕಿ ತೆಗೆದರು. ಈ ಕೆಲಸವನ್ನು ಒಂದು ವ್ರತದಂತೆ, ಹಠದಂತೆ, ಛಲಹೊತ್ತವರಂತೆ ಪ್ರೀತಿಯಿಂದ ಮಾಡಿದರು. ಅದರ ಫಲವೇ Everybody loves a good drought ಎಂಬ ಪುಸ್ತಕ! ಭಾರತದ ಅತ್ಯಂತ ಕಡುಬಡತನದಲ್ಲಿರುವ ಹಳ್ಳಿಗಳ ದಾರುಣ ಕತೆಗಳನ್ನೊಳಗೊಂಡಿರುವ ಈ ಕೃತಿ ಅಂತಾರಾಷ್ಟ್ರೀಯ ಹಾಗೂ ರಾಷ್ಟ್ರೀಯ ಮಟ್ಟದ ಹದಿಮೂರು ಪ್ರಶಸ್ತಿಗಳನ್ನು ಗಿಟ್ಟಿಸಿಕೊಂಡಿದೆ. ಅಮೆರಿಕ, ಕೆನಡಾ, ಯೂರೋಪ್‌ನ ಇಪ್ಪತ್ತಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳಲ್ಲಿ ಪಠ್ಯವಾಗಿದೆ. ಈ ಕೃತಿ ಅವರಿಗೆ ಅಂತಾರಾಷ್ಟ್ರೀಯ ಮನ್ನಣೆ ದೊರಕಿಸಿ ಕೊಟ್ಟಿದೆ. ಅವೆಲ್ಲಕ್ಕಿಂತ ಮುಖ್ಯವಾಗಿ ಅವರೊಬ್ಬ ಗಂಭೀರ, ಕಳಕಳಿಯ ಪತ್ರಕರ್ತ ಎಂಬ ಅಭಿದಾನಕ್ಕೆ ಪಾತ್ರರಾಗುವಂತೆ ಮಾಡಿದೆ.

ಅನೇಕರಿಗೆ ಗೊತ್ತಿರಲಿಕ್ಕಿಲ್ಲ, ಸಾಯಿನಾಥ ಆಂಧ್ರದ ಪ್ರತಿಷ್ಠಿತ ಮನೆತನದಲ್ಲಿ ಹುಟ್ಟಿದವರು. ಇವರು ದೇಶದ ರಾಷ್ಟ್ರಪತಿ ವರಹಗಿರಿ ಅವರ ಮಗಳ ಮಗ. ರಾಷ್ಟ್ರಪತಿ ಮೊಮ್ಮಗ ಅಂದ್ರೆ ಕೇಳಬೇಕೆ? ಬಾಲ್ಯವನ್ನು ಶ್ರೀಮಂತಿಕೆಯಲ್ಲಿಯೇ ಕಳೆದರು. ಚೆನ್ನೈನ ಜೇಸುಯ್ಟೈಟ್ಸ್‌ನಲ್ಲಿ ಕಾಲೇಜು ಶಿಕ್ಷಣ ಮುಗಿಸಿ, ಹೊಸದಿಲ್ಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸದ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಈ ಸಂದರ್ಭದಲ್ಲಿ ಸಾಯಿನಾಥ ಶ್ರೀಮಂತಿಕೆಯನ್ನೇ ತಲೆಗೇರಿಸಿಕೊಂಡು ಕನಸು ಕಾಣುತ್ತಾ ಕಳೆಯಲಿಲ್ಲ. ಅವರಿಗೆ ರಾಜಕೀಯದಲ್ಲಿ ಸ್ವಲ್ಪವೂ ಆಸಕ್ತಿಯಿರಲಿಲ್ಲ. ಪತ್ರಕರ್ತನಾಗಬೇಕೆಂಬ ಹಂಬಲ ತೀವ್ರವಾಗಿತ್ತು. ಈ ಬಗ್ಗೆ ಸಾಯಿನಾಥ ಹೇಳಿಕೊಂಡಿದ್ದಾರೆ. "ಒಬ್ಬ ಪತ್ರಕರ್ತ ಮನಸ್ಸು ಮಾಡಿದರೆ ವ್ಯವಸ್ಥೆ ಸುಧಾರಣೆಗೆ ಕಾರಣನಾಗಬಲ್ಲ. ತನ್ನ ವಿಚಾರಗಳಿಂದ ಅಸಂಖ್ಯ ಜನರ ಮನಸ್ಸಿನ ಮೇಲೆ ಪ್ರಭಾವ ಬೀರಬಲ್ಲ. ಸಾಮಾಜಿಕ ಬದ್ಧತೆಗೆ ಒಡ್ಡಿಕೊಳ್ಳಲು ಪತ್ರಿಕೋದ್ಯಮಕ್ಕಿಂತ ಉತ್ತಮ ಕ್ಷೇತ್ರ ಮತ್ತೊಂದಿಲ್ಲ."

ಹೀಗಾಗಿ ಸಾಯಿನಾಥ ಎಂ.ಎ. ಮುಗಿದ ಬಳಿಕ ೧೯೮೦ರಲ್ಲಿ ಯುನೈಟೆಡ್ ನ್ಯೂಸ್ ಆಫ್ ಇಂಡಿಯಾ(ಯುಎನ್‌ಐ) ಎಂಬ ಸುದ್ದಿಸಂಸ್ಥೆಯಲ್ಲಿ ವರದಿಗಾರರಾಗಿ ಸೇರಿದರು. ಎಲ್ಲ ವರದಿಗಾರರು ರಾಜಕೀಯ ಪಕ್ಷ, ಸಂಸತ್ತು, ವಾಣಿಜ್ಯ ವರದಿಗಾರಿಕೆಗೆ ಹಾತೊರೆಯುತ್ತಿದ್ದರೆ, ಸಾಯಿನಾಥ ಮಾತ್ರ ಮಾನವ ಆಸಕ್ತ (human interest) ವರದಿಗಳ ಬಗ್ಗೆ ಹೆಚ್ಚು ಆಸಕ್ತರಾಗಿದ್ದರು. ಕಾರ್ಮಿಕರು, ಅಸಂಘಟಿತ ವರ್ಗದವರು, ಶೋಷಣೆಗೆ ಒಳಗಾದವರ ಕುರಿತು ವಿಶೇಷ ವರದಿ ಮಾಡುತ್ತಿದ್ದರು. ಸುದ್ದಿಸಂಸ್ಥೆ ತನ್ನ ವರದಿಗಾರರ ಅತ್ಯುತ್ತಮ ವರದಿಗಳಿಗೆ ನೀಡುವ ವಾರ್ಷಿಕ ಪ್ರಶಸ್ತಿಗಳನ್ನು ಸಾಯಿನಾಥ ಎರಡು ಬಾರಿ ಪಡೆದರು. ಹಾಗಂತ ಅವರು ಯುಎನ್‌ಐನಲ್ಲಿ ಕೆಲಸ ಮಾಡಿದ್ದು ಮೂರೇ ವರ್ಷ!

ಅನಂತರ ಸಾಯಿನಾಥ ಮುಂಬೈಗೆ ಬಂದರು. ರುಸ್ಸಿ ಕೆ.ಕಾರಂಜಿಯಾ ಸಂಪಾದಕತ್ವದ 'ಬ್ಲಿಟ್ಜ್' ಪತ್ರಿಕೆಯಲ್ಲಿ ವಿದೇಶಾಂಗ ವ್ಯವಹಾರಗಳ ಸಂಪಾದಕರಾಗಿ ಸೇರಿದರು. ಆ ದಿನಗಳಲ್ಲಿ 'ಬ್ಲಿಟ್ಜ್' ಜನಪ್ರಿಯತೆಯ ಉತ್ತುಂಗದಲ್ಲಿತ್ತು. ಸುಮಾರು ಆರು ಲಕ್ಷ ಪ್ರತಿಗಳ ಪ್ರಸಾರವಿತ್ತು. ಇದರ ಹತ್ತು ಪಟ್ಟು ಜನ ಆ ಪತ್ರಿಕೆಯನ್ನು ಓದುತ್ತಿದ್ದರು. ಕಾರಂಜಿಯಾಗೆ ಮೊದಲಿನಿಂದಲೂ ಸಾಯಿನಾಥರನ್ನು ಕಂಡರೆ ಇಷ್ಟ ಪಾರ್ಟಿಗೆ ಹೋಗದ, ಗುಂಡು ಹಾಕದ ಸದಾಸುದ್ದಿಮನೆಯಲ್ಲೇ ಕಾಲಕಳೆಯುವ ಈ ನಿಷ್ಠಾವಂತ ಯುವ ಪತ್ರಕರ್ತನನ್ನು ಎಲ್ಲರೆದುರಿಗೆ ಪ್ರಶಂಸಿಸುತ್ತಿದ್ದರು. ಆ ದಿನಗಳಲ್ಲಿ 'ಬ್ಲಿಟ್ಜ್'ಗೆ ಕೆ.ಎ.ಅಬ್ಬಾಸ್ 'ಲಾಸ್ಟ್ ಪೇಜ್' ಅಂಕಣ ಬರೆಯುತ್ತಿದ್ದರು. ಅವರು ಏನಿಲ್ಲವೆಂದರೂ ಸುಮಾರು ನಲವತ್ತು ವರ್ಷ ಅಂಕಣ ಬರೆದಿರಬೇಕು. ಅವರು ಈ ಅಂಕಣವನ್ನು ಅರ್ಪಿಸಿದ್ದು ಸಾಯಿನಾಥಗೆ.

ಕಾರಂಜಿಯಾ ಕೆಲವೇ ವರ್ಷಗಳಲ್ಲಿ ಸಾಯಿನಾಥ ಅವರನ್ನು ಡೆಪ್ಯುಟಿ ಸಂಪಾದಕರನ್ನಾಗಿ ಬಡ್ತಿ ನೀಡಿದರು. ಇಡೀ 'ಬ್ಲಿಟ್ಜ್' ಪತ್ರಿಕೆಯ ಹೊಣೆಗಾರಿಕೆ ಅವರ ಮೇಲೆ ಬಿದ್ದಿತ್ತು. ಕಾರಂಜಿಯಾ ಹೆಸರಿಗೆ ಮಾತ್ರ ಸಂಪಾದಕರಾಗಿದ್ದರು. ಈ ಸಂದರ್ಭದಲ್ಲಿ ಸಾಯಿನಾಥ ಬರಗಾಲಕ್ಕೆ ತುತ್ತಾದ ದೇಶದ ಒಂಬತ್ತು ರಾಜ್ಯಗಳಲ್ಲಿ ವ್ಯಾಪಕ ಪ್ರವಾಸ ಮಾಡಿದರು. ಇದು ಅವರ ವೃತ್ತಿಜೀವನದ ಮಹತ್ವದ ತಿರುವು. ಅವರ ಬದುಕು, ಭವಿಷ್ಯ ಹಾಗೂ ಚಿಂತನೆಯನ್ನು ಬದಲಿಸಿದ ಕ್ಷಣಗಳಿವು. "ಈ ಪ್ರವಾಸ ಮುಗಿಸಿ ಬಂದ ನಂತರ ನನಗೆ ಅನಿಸಿತು. ನಾನು ಈಗ ಮಾಡುತ್ತಿರುವುದು ಪತ್ರಿಕೋದ್ಯಮವಾ? ನಾನು ನಿಜಕ್ಕೂ ಜನರಿಗೆ ಬೇಕಾದ ವಿಚಾರಗಳನ್ನು ಬರೆಯುತ್ತಿದ್ದೇನಾ? ಪತ್ರಕರ್ತನಾಗಿ ಇನ್ನಷ್ಟು ಸಾರ್ಥಕ್ಯ ಪಡೆಯುವುದು ಹೇಗೆ? ಈ ಸಂದರ್ಭದಲ್ಲಿ ನನಗೆ ಕೆಲ ಪ್ರಶಸ್ತಿಗಳು ಬಂದವು. ಆದರೆ ಅವುಗಳನ್ನು ಸ್ವೀಕರಿಸಬೇಕೆಂದು ನನಗೆ ಅನಿಸಲೇ ಇಲ್ಲ" ಎಂದು ಸಾಯಿನಾಥ ಆ ದಿನಗಳ ಕುರಿತು ಹೇಳಿದ್ದಾರೆ.

ಸಾಯಿನಾಥ ತಲೆಯಲ್ಲಿ ಹೊಸ ಹೊಸ ವಿಚಾರಗಳು ಸುಳಿಯುತ್ತಿದ್ದ ದಿನಗಳವು. ದೇಶದ ಆರ್ಥಿಕ, ಸಾಮಾಜಿಕ ರಂಗಗಳಲ್ಲೂ ಸಾಕಷ್ಟು ಪರಿವರ್ತನೆಯಾಗುತ್ತಿದ್ದ ದಿನಗಳವು. ೧೯೯೧ರಲ್ಲಿ ಹಣಕಾಸು ಸಚಿವ ಡಾ॥ಮನಮೋಹನ್ ಸಿಂಗ್ ಐಎಂಎಫ್ ಪ್ರಣೀತ ಆರ್ಥಿಕ ಸುಧಾರಣೆಗೆ ಮುಂದಾದರು. ಇದರ ಪರಿಣಾಮ ನೇರವಾಗಿ ಪತ್ರಿಕೆಗಳ ಮೇಲೆ ಆಗಿತ್ತು. ಪತ್ರಿಕೆಗಳ 'ಸುದ್ದಿ'ಯಿಂದ 'ಮನರಂಜನೆ'ಯತ್ತ ಗ್ರಾಮಗಳಿಂದ ನಗರಗಳತ್ತ ನಿಧಾನವಾಗಿ ವಾಲತೊಡಗಿದವು. ಕೊಳ್ಳುಬಾಕ ಸಂಸ್ಕೃತಿ, ವಿಲಾಸಿ ಜೀವನಶೈಲಿಗಳಿಗೆ ಪತ್ರಿಕೆಗಳಲ್ಲಿ ಏಕಾಏಕಿ ಪ್ರಾಮುಖ್ಯ ದೊರೆಯಲಾರಂಭಿಸಿದವು. ಬಡತನ, ಕ್ಷಾಮ, ಹಳ್ಳಿಗಳ ಸಮಸ್ಯೆ, ರೈತರ ಸಂಕಟಗಳಗೆ ಸಿಗಬೇಕಾದಷ್ಟು ಪುಟ, ಅವಕಾಶಗಳು ಸಿಗದಾದವು.

ಸಾಯಿನಾಥಗೆ ಯಾವಾಗ ಈ ಗುಮಾನಿಗಳು ಸುಳಿಯಲಾರಂಭಿಸಿದವೋ, ಅವರು ಕೆಲಸದಲ್ಲಿ ಮುಂದುವರಿಯುವುದರ ಬಗ್ಗೆ ಗಂಭೀರವಾಗಿ ಯೋಚಿಸಲಾರಂಭಿಸಿದರು. 'ಬ್ಲಿಟ್ಜ್' ಪತ್ರಿಕೆಯಲ್ಲಿ ಹತ್ತು ವರ್ಷ ಕಳೆದಿದ್ದವು. ಮುಂದುವರಿಯುವ ಮನಸ್ಸಿರಲಿಲ್ಲ. ಬೇರೆ ಪತ್ರಿಕೆಗಳಲ್ಲೂ ಅದಕ್ಕಿಂತ ಭಿನ್ನ

ವಾತಾವರಣವಿಲ್ಲವೆಂದು ಅವರಿಗೆ ಮನವರಿಕೆಯಾಗಿತ್ತು. ಆಗ ಅವರೊಂದು ನಿರ್ಧಾರಕ್ಕೆ ಬಂದರು. "ಭಾರತೀಯ ಪತ್ರಿಕೆಗಳೆಲ್ಲ ಮೇಲ್ಪದರದಲ್ಲಿರುವ ಶೇ೫ರಷ್ಟು ಜನರ ಬೇಕು-ಬೇಡಿಕೆಗಳನ್ನು ಪೂರೈಸುವ ವರದಿಗಾರಿಕೆಯಲ್ಲಿ ತೊಡಗಿದರೆ, ನಾನು ಕೆಳ ಪದರದಲ್ಲಿರುವ ಶೇ೫ರಷ್ಟು ಜನರು ಬದುಕು, ಬವಣೆ ಹಾಗೂ ಭವಿಷ್ಯದ ಬಗ್ಗೆ ವರದಿ ಮಾಡಬೇಕು."

'ಬ್ಲಿಟ್ಜ್' ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೊರಬಿದ್ದರು. ೧೯೯೩ ರಲ್ಲಿ 'ಟೈಮ್ಸ್ ಆಫ್ ಇಂಡಿಯಾ' ಫೆಲೋಶಿಪ್‌ಗೆ ಅರ್ಜಿ ಸಲ್ಲಿಸಿದರು. ದೇಶದ ಅತ್ಯಂತ ಹಿಂದುಳಿದ ಪ್ರದೇಶಗಳನ್ನು ಗುರುತಿಸಿ, ಅಲ್ಲಿ ವಾಸ್ತವ್ಯ ಹೂಡಿ, ಜನಜೀವನವನ್ನು ಸಾಕ್ಷಾತ್ ಅಧ್ಯಯನ ಮಾಡಿ, ಪತ್ರಿಕೆಗೆ ವರದಿ ಮಾಡುವ ತಮ್ಮ ಮನದಾಳದ ಅಭಿಲಾಷೆಯನ್ನು ವ್ಯಕ್ತಪಡಿಸಿದಾಗ ಫೆಲೋಶಿಪ್ ನೀಡುವ ಸಮಿತಿ ಒಪ್ಪಿಗೆ ಸೂಚಿಸಿತು.

ಸಾಯಿನಾಥ ಹೆಗಲಿಗೆ ಬ್ಯಾಗೇರಿಸಿಕೊಂಡು ಹಳ್ಳಿಯತ್ತ ಹೊರಟೇಬಿಟ್ಟರು. ಇವರು ಹೊರಟ ಊರುಗಳು ಹೇಗಿದ್ದವೆಂದರೆ, ಜತೆಯಲ್ಲಿ ಬರಲು ಫೋಟೋಗ್ರಾಫರ್‌ಗಳು ನಿರಾಕರಿಸಿದರು. ಸ್ಥಳೀಯ ಭಾಷೆ ಗೊತ್ತಿಲ್ಲದ್ದರಿಂದ ದುಭಾಷಿಯಾಗಲು ಸ್ನೇಹಿತರು ಸಿಗಲಿಲ್ಲ. ಹದಿನೆಂಟು ತಿಂಗಳ ಕಾಲ ಒಂದೇ ಸಮನೆ ಐದು ರಾಜ್ಯಗಳ ಹಿಂದುಳಿದ ಜಿಲ್ಲೆಗಳ ಹಳ್ಳಿ ಹಳ್ಳಿಗಳನ್ನು ಅಲೆದು ಸುಮಾರು ೮೪ ವರದಿಗಳನ್ನು ಬರೆದರು. ಅವೆಲ್ಲ 'ಟೈಮ್ಸ್ ಆಫ್ ಇಂಡಿಯಾ'ದಲ್ಲಿ ಪ್ರಕಟವಾದವು. ಈ ಎಲ್ಲ ಲೇಖನಗಳನ್ನು ಸಂಗ್ರಹಿಸಿ 'ಎವರಿಬಡಿ ಲವ್ಸ್ ಎ ಗುಡ್ ಡ್ರೌಟ್' ಎಂಬ ಪುಸ್ತಕ ಪ್ರಕಟಿಸಿದರು. ಭಾರತದ ಅನೇಕ ಹಳ್ಳಿಗಳ ಭಯಾನಕ ಚಿತ್ರಣವನ್ನು ಈ ಪುಸ್ತಕ ತೆರೆದಿಟ್ಟಿತು.

"ಭಾರತ ಹಳ್ಳಿಗಳ ದೇಶ ಅಂತಾರೆ. ಆದರೆ ಭಾರತೀಯ ಪತ್ರಿಕೆಗಳಲ್ಲಿ ಗ್ರಾಮೀಣ ವರದಿಗಾರಿಕೆಗೆ ಆದ್ಯತೆ ಸಿಗುತ್ತಿಲ್ಲ. ಗ್ರಾಮೀಣ ಭಾಗದ ಸುದ್ದಿ, ವಿಶೇಷ ವರದಿ, ನುಡಿಚಿತ್ರಗಳಿಗೆ ಸಿಗಬೇಕಾದ ಮಹತ್ವ ಸಿಗುತ್ತಿಲ್ಲ. ಈ ವಿಷಯಗಳನ್ನು ವರದಿ ಮಾಡುವ ಪತ್ರಕರ್ತರೂ ವಿರಳ. ನಗರ ಪ್ರದೇಶದಿಂದ ಜಿಲ್ಲೆಗಳಿಗೆ ಪತ್ರಕರ್ತರನ್ನು ವರ್ಗಮಾಡಿದರೆ ಅದನ್ನು ಶಿಕ್ಷೆ ಎಂದೇ ಭಾವಿಸುತ್ತಾರೆ. ಈ ಕಾರಣಕ್ಕೆ ಅವರು ಪತ್ರಿಕೆಯನ್ನೂ ಬಿಡುತ್ತಾರೆ ಹಾಗೂ ನಗರದಲ್ಲೇ ವಾಸಿಸುತ್ತಾರೆ. ಯಾವ ಪತ್ರಕರ್ತನೂ ಹಳ್ಳಿಗಳ ಕಡೆ ಹೋಗುವುದೇ ಇಲ್ಲ. ಈ ಹಿನ್ನೆಲೆಯಲ್ಲಿ ಪಿ.ಸಾಯಿನಾಥ ಮಾಡುತ್ತಿರುವ ಕೆಲಸ ಮುಖ್ಯ ಹಾಗೂ ಅದ್ಭುತವಾದದ್ದು ಎಂದೆನಿಸುತ್ತದೆ."

ಹೀಗೆಂದು ಖ್ಯಾತ ಅಂಕಣಕಾರ ಶಾಮಲಾಲ್, ಪತ್ರಕರ್ತ ಸಾಯಿನಾಥ ಬಗ್ಗೆ ಬರೆದಿದ್ದರು. ಅಮೆರಿಕದ ಹವ್ಯಾಸಿ ಪತ್ರಕರ್ತೆ ಕಾಲಿನ್ ರೋಚ್ ಸಾಯಿನಾಥ ಜತೆ ದೀರ್ಘಸಂವಾದ ನಡೆಸಿದ ಬಳಿಕ, "ಗ್ರಾಮೀಣ ಪ್ರದೇಶದ ಬಗ್ಗೆ ಸಾಯಿನಾಥರ ರೀತಿ ಗಂಭೀರ ಅಧ್ಯಯನ ಮಾಡಿದ ಮತ್ತೊಬ್ಬ ಪತ್ರಕರ್ತನನ್ನು ನಾನು ನೋಡಿಲ್ಲ. ನಿಜಕ್ಕೂ ಅವರು ಅಪ್ರತಿಮ, ಅಸಾಧಾರಣ ಪತ್ರಕರ್ತ. ವರ್ಷದಲ್ಲಿ ಒಂಭತ್ತು ತಿಂಗಳು ಹಳ್ಳಿಗಳಲ್ಲೇ ಕಳೆಯುವ ಅವರ ಶ್ರದ್ಧೆಗೆ ನಾನು ಬೆರಗಾಗಿದ್ದೇನೆ. ಅವರು ಸದಾ ಬಡತನ, ಬರಗಾಲ, ಹಳ್ಳಿಗಳ ಜನಜೀವನ, ಅಲ್ಲಿನ ಪರಿಸರದ ಬಗೆಗೇ ಸದಾ ಯೋಚಿಸುತ್ತಿರುತ್ತಾರೆ ಹಾಗೂ ಅದರ ಬಗೆಗೆ ಮಾತನಾಡುತ್ತಿರುತ್ತಾರೆ. ಅವರಿಗೆ ಅದೊಂದು obsession, ಸಾಯಿನಾಥ

ಜತೆ ಒಂದು ದಿನ ಕಳೆದರೆ ಐವತ್ತು ಹಳ್ಳಿಗಳನ್ನು ನೋಡಿದ ಅನುಭವವಾಗುತ್ತದೆ" ಎಂದು ತನ್ನ ಅನುಭವ ಕಥನದಲ್ಲಿ ಬರೆದುಕೊಂಡಿದ್ದಾಳೆ.

ಸಾಯಿನಾಥ ಟೈಮ್ಸ್ ಆಫ್ ಇಂಡಿಯಾ ಫೆಲೋಶಿಪ್ ಪಡೆದು ಹದಿನೆಂಟು ತಿಂಗಳುಗಳ ಕಾಲ ಹಳ್ಳಿಗಳಲ್ಲಿ ತಿರುಗಾಡಿ ೮೪ ವಿಷಯಗಳ ಬಗ್ಗೆ ವರದಿ ಮಾಡಿ Every body loves a good drought ಎಂಬ ಪುಸ್ತಕ ಮಾಡಿದರು. ಈ ಕೃತಿ ನಿಸ್ಸಂದೇಹವಾಗಿ ಭಾರತದ ಹಳ್ಳಿಗಳ ಚಿತ್ರಣವನ್ನು ಬೆತ್ತಲೆಗೊಳಿಸಿದ ಅಸಾಮಾನ್ಯ ಪ್ರಯತ್ನ. ಈ ಕೃತಿಯಿಂದ ಪ್ರಭಾವಿತವಾದ ತಮಿಳುನಾಡು ಸರಕಾರ ತನ್ನ ಬರಗಾಲ ನಿರ್ವಹಣೆ ಕಾರ್ಯಕ್ರಮವನ್ನು ಸಂಪೂರ್ಣ ಬದಲಿಸಿತು. ಮಧ್ಯ ಪ್ರದೇಶ ಹಾಗೂ ಒರಿಸ್ಸಾ ಸರಕಾರಗಳು ಸಹ ಗ್ರಾಮೀಣ ಪ್ರದೇಶಗಳಿಗೆ ರೂಪಿಸಿದ ತಮ್ಮ ಯೋಜನೆಗಳನ್ನು ಆಮೂಲಾಗ್ರ ಬದಲಿಸಿದವು. ಕೆಲವು ಸರಕಾರಗಳು ಸಾಯಿನಾಥ ಪುಸ್ತಕದಲ್ಲಿನ ಕಠೋರ ಸತ್ಯಗಳನ್ನು ಕಂಡು ಎಚ್ಚೆತ್ತುಕೊಂಡವು.

ಸಾಯಿನಾಥ ಬರಹದ ವಸ್ತುಗಳನ್ನು ಇಂಗ್ಲೀಷ್ ಪತ್ರಿಕೆಗಳು ಮೊದಲ ಬಾರಿಗೆ ಬೆರಗುಗಣ್ಣುಗಳಿಂದ ನೋಡಲಾರಂಭಿಸಿದವು. ಅವರ ವರದಿಗಾರಿಕೆಯ ವಿಧಾನವನ್ನು ಕೆಲ ಪತ್ರಿಕೆಗಳು ಸಾಂಸ್ಥೀಕರಣಗೊಳಿಸಿದವು. ದೇಶದಲ್ಲಿನ ಸುಮಾರು ಅರವತ್ತು ಪತ್ರಿಕೆಗಳು ಬಡತನ, ಬರಗಾಲ ಹಾಗೂ ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಅಂಕಣಗಳನ್ನು ಆರಂಭಿಸಿದವು. ಈ ಕುರಿತು ಹೆಚ್ಚಿನ ಸ್ಥಳಾವಕಾಶವನ್ನು ನೀಡಲಾರಂಭಿಸಿದವು. ಈ ಕೃತಿಗೆ ಅನೇಕ ಅಂತಾರಾಷ್ಟ್ರೀಯ ಪ್ರಶಸ್ತಿಗಳ ಲಭಿಸಿದವು. ಏನಿಲ್ಲವೆಂದರೂ ಪ್ರತಿಷ್ಠಿತವೆನಿಸುವ ಇಪ್ಪತ್ತು ಪ್ರಶಸ್ತಿಗಳು ಬಂದಿರಬಹುದು. ಯೂನಿವರ್ಸಿಟಿ ಆಫ್ ವೆಸ್ಟರ್ನ್ ಒಂಟಾರಿಯೊ, ಮಾಸ್ಕೋ ಯೂನಿವರ್ಸಿಟಿ ಸಾಯಿನಾಥರನ್ನು ಆಮಂತ್ರಿಸಿ ಗ್ರಾಮೀಣ ಬದುಕಿನ ಕುರಿತು ಅಲ್ಲಿನ ವಿದ್ಯಾರ್ಥಿಗಳಿಗೆ ಪಾಠ ಹೇಳಿಸಿದರು. ಮಾನವ ಹಕ್ಕುಗಳು ಹಾಗೂ ವಿಶ್ವ ಸಂವಹನಕ್ಕೆ ಸಂಬಂಧಿಸಿದ ಯುನೆಸ್ಕೋ ಅಂಗಸಂಸ್ಥೆಗಳು ಸಾಯಿನಾಥ ಅವರಿಂದ ವಿಶೇಷ ಉಪನ್ಯಾಸಗಳನ್ನು ಬೇರೆ ಬೇರೆ ದೇಶಗಳಲ್ಲಿ ನಿಯೋಜಿಸಿದವು. ಅಭಿವೃದ್ಧಿ ಪತ್ರಿಕೋದ್ಯಮಕ್ಕೆ ಮೀಸಲಾಗಿಟ್ಟ ಎಲ್ಲ ಪ್ರಶಸ್ತಿಗಳು ಅವರನ್ನು ಅರಸಿ ಬಂದವು.

ಸಾಯಿನಾಥ ಹಳ್ಳಿಗಳಿಗೆ ಕಾಲಿಟ್ಟು ಅಧ್ಯಯನ ನಡೆಸುವ ತನಕ ರಾಷ್ಟ್ರೀಯ ಮಾಧ್ಯಮಗಳಲ್ಲಿ ಗ್ರಾಮೀಣ ಬದುಕಿನ ದಾರುಣ ಮುಖ ಗೊತ್ತಿರಲಿಲ್ಲ. ಮಾಧ್ಯಮಗಳು ಸಹ ಇದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಆಂಧ್ರಪ್ರದೇಶದ ಅನಂತಪುರಂ ಜಿಲ್ಲೆಯೊಂದರಲ್ಲೇ ೧೯೯೭ ರಿಂದ ೨೦೦೦ರವರೆಗೆ ಸುಮಾರು ೧೪೦೦ ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಏನಿಲ್ಲವೆಂದರೂ ಪ್ರತಿದಿನ ಸರಾಸರಿ ಇಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದರು. ಆರಂಭದಲ್ಲಿ ಪತ್ರಿಕೆಗಳಲ್ಲಿ ಈ ಸುದ್ದಿ ಮುಖಪುಟದಲ್ಲಿ ಪ್ರಕಟವಾಗುತ್ತಿತ್ತು. ಕ್ರಮೇಣ ರೈತರ ಆತ್ಮಹತ್ಯೆ ಸುದ್ದಿ ಒಳಪುಟಗಳಲ್ಲಿ ಅಚ್ಚಾಗುತ್ತಿತ್ತು. ಮೂರ್ನಾಲ್ಕು ಕಾಲಮ್ಮು ಹರವಿನಲ್ಲಿ ಪ್ರಿಂಟಾಗುತ್ತಿದ್ದ ಇದೇ ಸುದ್ದಿ ಸಿಂಗಲ್ ಕಾಲಮ್ಮಿಗೆ ಇಳಿಯಿತು. ಅನಂತರ ಜಾಗ ತುಂಬಿಸುವುದಕ್ಕಾಗಿ ಬಳಸುವ ಫಿಲ್ಲರ್ ಸುದ್ದಿಯಾಯಿತು. ಕೊನೆ ಕೊನೆಗೆ ಈ ಘಟನೆಯನ್ನು ಯಾರೂ ಗಂಭಿರವಾಗಿ ತೆಗೆದುಕೊಳ್ಳದ್ದರಿಂದ, ರೈತರ ಆತ್ಮಹತ್ಯೆ ಸುದ್ದಿಯೇ

ಆಗುತ್ತಿರಲಿಲ್ಲ. 'ದಿನವೂ ಸಾಯುವವರಿಗೆ ಅಳುವವರು ಯಾರು' ಎಂಬಂತೆ ಪತ್ರಿಕೆಗಳು ಸಹ ರೈತರ ಆತ್ಮಹತ್ಯೆ ಸುದ್ದಿ ಪ್ರಕಟಿಸುವುದನ್ನೇ ಬಿಟ್ಟು ಬಿಟ್ಟವು!

ಸಾಯಿನಾಥ ಅಧ್ಯಯನದಿಂದ ಮತ್ತೊಂದು ಸಂಗತಿ ಹೊರಬಿತ್ತು. ೧೮೦೦ ರೈತರ ಪೈಕಿ ೧೬೦೧ ಮಂದಿ ಸಿಬಾ-ಗೈಗಿ ಕಂಪನಿಯ ಕೀಟನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದು. ಇದಕ್ಕೆ ಕಾರಣವೂ ಇತ್ತು. ಸರಕಾರ ಈ ಕಂಪನಿಯ ಜತೆ ಷಾಮೀಲಾಗಿ ರೈತರಿಗೆ ಈ ಕೀಟನಾಶಕವನ್ನು ಉಚಿತವಾಗಿ ನೀಡುತ್ತಿತ್ತು. ಕಾಸಿಲ್ಲದ ರೈತರಿಗೆ ವಿಷವನ್ನೂ ಪುಕ್ಕಟೆಯಾಗಿ ಸರಕಾರ ನೀಡುವಂತಾಗಿದ್ದರಿಂದ ಆತ್ಮಹತ್ಯೆ ಸುಲಭವಾಗಿ ಪರಿಣಮಿಸಿತ್ತು.

ಈ ಎಲ್ಲ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದೇ ತಡ, ದೇಶದಾದ್ಯಂತ ವ್ಯಾಪಕ ಪ್ರತಿಕ್ರಿಯೆ ವ್ಯಕ್ತವಾದವು. ರೈತರ ಸಮಸ್ಯೆಗಳ ವಿವಿಧ ಆಯಾಮದ ಪರಿಚಯವಾಯಿತು. ಸಾಯಿನಾಥ ಬೆಂಬತ್ತಿ ಹೋದ ವಿಷಯದ ಅಗಾಧತೆ ಎಷ್ಟೊಂದು ವಿಸ್ತಾರವಾಗಿದೆಯೆಂದು ಮನವರಿಕೆಯಾಗಿದ್ದೇ ಆಗ, ಸರಕಾರದ ಅರ್ಥಹೀನ ನೀತಿ, ಸಾಲಗಾರರ ಕಿರುಕುಳ, ಮಧ್ಯವರ್ತಿಗಳ ಕಿರುಕುಳ, ಅಸ್ಥಿರ ಬೆಲೆ, ಹವಾಮಾನದ ವೈಪರಿತ್ಯ, ಜಾಗತೀಕರಣದ ಹೊಡೆತ, ಬದಲಾದ ಜೀವನಶೈಲಿ, ಬದಲಾದ ಕೃಷಿ ಪದ್ಧತಿ ಹೀಗೆ ನೂರಕ್ಕೂ ಹೆಚ್ಚು ಕಾರಣಗಳನ್ನು ಸಾಯಿನಾಥ ಪಟ್ಟಿ ಮಾಡಿದರು. ಪತ್ರಕರ್ತನೊಬ್ಬ ಹಳ್ಳಿಯಲ್ಲಿ ತಿರುಗಾಡಿ ನೋಡಿ ಬಂದು ವರದಿ ಇದಾಗಿರಲಿಲ್ಲ. ಹಳ್ಳಿಗಳ ಜೀವನಾದರ್ಶನವನ್ನು ಮೊಗೆದು ಕೊಡುವ ತಲಸ್ಪರ್ಶಿ ಅಧ್ಯಯನವಾಗಿತ್ತು.

"ನಾನು ಮುಂಬೈ ಬಿಟ್ಟು ಹಳ್ಳಿಯೆಡೆಗೆ ಹೊರಟಾಗ ನನ್ನ ಅನೇಕ ಸ್ನೇಹಿತರು ನನಗೆ ಬುದ್ಧಿಮಾತು ಹೇಳಿದರು. ಇನ್ನೊಮ್ಮೆ ಯೋಚಿಸು ಎಂದು ಸಲಹೆ ನೀಡಿದರು. ಆದರೆ ನಾನು ನನ್ನ ನಿರ್ಧಾರ ಬದಲಿಸಲಿಲ್ಲ. ಅಷ್ಟರೊಳಗೆ ನಾನು ಮುಂದಿನ ಆರು ವರ್ಷ ಕಾಲ ಮಾಡಬೇಕಾದ ಯೋಜನೆ ಸಿದ್ಧಪಡಿಸಿದ್ದೆ."

ಭಾರತೀಯ ಪತ್ರಿಕೋಧ್ಯಮದಲ್ಲಿ ಗ್ರಾಮೀಣ ವರದಿಗಾರಿಕೆಗೊಂದು ವಿಶಿಷ್ಟ ಸ್ಥಾನಮಾನ ತಂದುಕೊಟ್ಟ ಸಾಯಿನಾಥ ಸ್ಪಷ್ಟೋಕ್ತಿಯಿದು. ಒಂದು ವೇಳೆ ಸಾಯಿನಾಥ ಮುಂಬೈಯಲ್ಲಿಯೇ ಉಳಿದಿದ್ದರೆ ಪ್ರಮುಖ ಪತ್ರಿಕೆಗಳಲ್ಲಿ ಸ್ಥಾನಿಕ ಸಂಪಾದಕನೋ, ಪ್ರಧಾನ ಸಂಪಾಧಕನೋ ಆಗುತ್ತಿದ್ದರೇನೋ? ಆದರೆ ಅವರಿಗೆ ಈಗ ಸಿಕ್ಕಿದಷ್ಟು ಆದರ, ಜನಪ್ರಿಯತೆ, ಮನ್ನಣೆ, ಪ್ರಶಸ್ತಿ ಹಾಗೂ ಅಂತರಾಷ್ಟ್ರೀಯ ಗೌರವ ಸಿಗುತ್ತಿರಲಿಲ್ಲ. "ಗ್ರಾಮೀಣಬದುಕನ್ನು ಅನಾವರಣಗೊಳಿಸಿದ ಧನ್ಯತಾಭಾವ ನನಗೆ ನಗರದಲ್ಲಿ ಉಳಿದು ಪತ್ರಕರ್ತನಾಗಿದ್ದಿದ್ದರೆ ಸಿಗುತ್ತಿರಲಿಲ್ಲ. ಈ ಪ್ರಮಾಣದ ಜೀವನ ಅನುಭವ, ಜೀವನ ದರ್ಶನವೂ ಆಗುತ್ತಿರಲಿಲ್ಲ. ಸಂಬಳ, ಹುದ್ದೆ ಎಲ್ಲವನ್ನೂ ಬದಿಗಿಟ್ಟು ಹಳ್ಳಿಯನ್ನು ಅಧ್ಯಯನಕ್ಕೆಂದು ಎತ್ತಿಕೊಂಡಿದ್ದು ನನ್ನ ಜೀವನದ ಮಹತ್ವದ ನಿರ್ಧಾರಗಳಲ್ಲೊಂದು. ಅದೇ ನನ್ನ ಮುಂದಿನ ಜೀವನವನ್ನು ನಿರ್ದೇಶಿಸಬಹುದೆಂದು ಭಾವಿಸಿರಲಿಲ್ಲ" ಎಂದು ಸಾಯಿನಾಥ ಹೇಳುತ್ತಾರೆ.ಪ್ರಸ್ತುತ ಸಾಯಿನಾಥ 'ದಿ ಹಿಂದು' ಪತ್ರಿಕೆಯಲ್ಲಿ ಗ್ರಾಮೀಣ ವ್ಯವಹಾರಗಳ(Rural Affairs)ಸಂಪಾದಕರಾಗಿ ಕೆಲಸ ಮಾಡುತ್ತಿದ್ದಾರೆ.

(ಸಾಭಾರ – ವಿಜಯಕರ್ನಾಟಕ)

* * *

ಜನಪದ ನಿಲಯದ ಅಂತರಂಗದಲ್ಲಿ.........೪೦

– *ಸುರೇಂದ್ರ ಕೌಲಗಿ*



ನಾನು ಮೇಲುಕೋಟೆಗೆ ಬಂದು ನೆಲೆಸಿದಾಗಿನಿಂದಲೂ ಜಯಪ್ರಕಾಶ್ ನಾರಾಯಣರನ್ನು ಮೇಲುಕೋಟೆಗೆ ಕರೆಸಬೇಕೆಂಬ ಇಚ್ಛೆ ತೀವ್ರವಾಗಿ ಕೆಲಸ ಮಾಡುತ್ತಿತ್ತು. ಅದಕ್ಕಾಗಿ ಸೂಕ್ತ ಕಾಲಾವಕಾಶ ಮತ್ತು ಕಾರ್ಯಕ್ರಮದ ನಿರೀಕ್ಷಣೆಯಲ್ಲಿದ್ದೆ. ಇದು ಸುಮಾರು ೧೯೫೪ರಲ್ಲಿ. ಆಗ ಟ್ರಸ್ಟಿನಲ್ಲಿ ಮೂರು ಪ್ರಮುಖ ಕಾರ್ಯಕ್ರಮಗಳು ನಡೆಯುತ್ತಿದ್ದವು. ಒಂದು ಕರುಣಾಗೃಹ, ಎರಡನೆಯದು ವಯಸ್ಕ ಮಹಿಳೆಯರ ಶಾಲೆ ಮತ್ತು ಮೂರನೆಯದು ಮುದ್ರಣಾಲಯ.

ಇದೇ ಸುಮಾರಿಗೆ ಜಯಪ್ರಕಾಶ್ ನಾರಾಯಣರ ಮಾರ್ಗದರ್ಶನದಲ್ಲಿ ಸ್ವಯಂಸೇವಾ ಸಂಸ್ಥೆಗಳ ಒಕ್ಕೂಟವೊಂದು ದಿಲ್ಲಿಯಲ್ಲಿ ರಚಿತವಾಯಿತು. ಅದರ ಹೆಸರು Assoiciation of Voluntary Agencics for Rural Development.(AVARD) ಈ ಸಂಸ್ಥೆಯನ್ನು ೧೯೫೮ ಏಪ್ರಿಲ್‌ನಲ್ಲಿ ಸ್ಥಾಪಿಸಲಾಯಿತು. ಈ ಸಂಸ್ಥೆಯ ಸ್ಥಾಪನೆಯ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದವರು ಧರ್ಮಪಾಲ್. ಧರ್ಮಪಾಲ್ ಓರ್ವ ಇತಿಹಾಸತಜ್ಞರು. ಗಾಂಧೀಜಿಯವರ ವಿಚಾರದಿಂದ ಪ್ರಭಾವಿತರಾಗಿದ್ದವರು. ಕ್ರಮೇಣ ಜಯಪ್ರಕಾಶ್‌ನಾರಾಯಣರ ಪ್ರಭಾವಕ್ಕೂ ಒಳಗಾದರು. ಇವರ ವಿದ್ವತ್ತನ್ನು ಮತ್ತು ಗ್ರಾಮೀಣ ಭಾರತದ ಅಭಿವೃದ್ಧಿಯ ಬಗ್ಗೆ ಇವರಲ್ಲಿದ್ದ ಕಳಕಳಿಯನ್ನು ಗಮನಿಸಿದ ಜಯಪ್ರಕಾಶರು ಧರ್ಮಪಾಲ್‌ರನ್ನು ತಮ್ಮ ನಿಕಟತಮ ಕಾರ್ಯಕರ್ತರ ಬಳಗಕ್ಕೆ ಸೇರಿಸಿಕೊಂಡರು ಅವರೊಂದಿಗೆ ದೇಶದ ಅಭಿವೃದ್ಧಿಯ ವಿಷಯವಾಗಿ ಆಗಾಗ್ಗೆ ವಿಚಾರ ವಿನಿಮಯ ನಡೆಸುತ್ತಿದ್ದರು. ಅಲ್ಲದೆ ಜಯಪ್ರಕಾಶ್ ನಾರಾಯಣರು ತಮಗೆ ಆಸಕ್ತಿ ಇದ್ದ ಇತರ ಪ್ರಚಲಿತ ಕಾರ್ಯಕ್ರಮದಲ್ಲಿ ಧರ್ಮಪಾಲರ ಮಾರ್ಗದರ್ಶನವನ್ನು , ಸಹಕಾರವನ್ನು

ಪಡೆಯುತ್ತಿದ್ದರು. ಹಲವಾರು ಬಾರಿ ಅವರನ್ನು ತಮ್ಮ ಸುಖೋದೇವರದಲ್ಲಿಯ ಸರ್ವೋದಯ ಆಶ್ರಮಕ್ಕೂ ಕರೆಸಿಕೊಂಡಿದ್ದರು. 'ಅವಾರ್ಡ್' ಸಂಸ್ಥೆಯ ಸ್ಥಾಪನೆಯ ಸಂದರ್ಭದಲ್ಲಿ ಧರ್ಮಪಾಲ್ ವಹಿಸಿದ್ದ ಶ್ರಮ ಅಷಿಷ್ಟಲ್ಲ ಅವರು ಭಾರತವನ್ನೆಲ್ಲ ಪ್ರವಾಸ ಮಾಡಿದ್ದರಷ್ಟೆ ಅಲ್ಲ ಆ ಸಂಸ್ಥೆಗೆ ಅಗತ್ಯವಾದ ಸಂವಿಧಾನವನ್ನು ಸಹ ರಚಿಸಿ ಜಯಪ್ರಕಾಶರ ಮುಂದೆ ಇಟ್ಟರು. ಧರ್ಮಪಾಲ್ ರಂಥ ಶ್ರದ್ಧಾವಾನ್ ವ್ಯಕ್ತಿ ದೊರೆಯದೆ ಹೋಗಿದ್ದರೆ. 'ಅವಾರ್ಡ್'ನಂಥ ಸಂಸ್ಥೆಯ ಸ್ಥಾಪನೆಯಾಗುತ್ತಿರಲಿಲ್ಲ. ಧರ್ಮಪಾಲ್ ಹೇಗೆ ತಮ್ಮ ವಿದ್ವತ್ತಿನಲ್ಲಿ ವಿಶೇಷ ಆಕರ್ಷಕತೆಯನ್ನು ಹೊಂದಿದ್ದರೋ ಅದೇ ರೀತಿ ತಮ್ಮ ದೈಹಿಕ ವಿಷಯದಲ್ಲೂ ಆಕರ್ಷಕ ವ್ಯಕ್ತಿತ್ವವನ್ನು ಹೊಂದಿದ್ದಂಥವರಾಗಿದ್ದರು. ಸಾಮಾನ್ಯ ಎತ್ತರದ, ದುಂಡು ಮುಖದ, ನೀಳ ಮೂಗಿನ, ಕೆಂಪು ವರ್ಣದ ಶರೀರವನ್ನು ಹೊಂದಿದ್ದರು. ಶ್ವೇತ ವರ್ಣದ ಖಾದಿ ಪಂಚೆ ಮತ್ತು ಜುಬ್ಬಾ ದರಿಸುತ್ತಿದ್ದರು ಎಲ್ಲರೊಂದಿಗೂ ಸ್ನೇಹ ಪೂರ್ಣವಾದ ವರ್ತನೆಯನ್ನಿರಿಸಿಕೊಳ್ಳುತ್ತಿದ್ದರು. ಇಂಗ್ಲೀಷ್ ಮತ್ತು ಹಿಂದಿ ಎರಡೂ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಧರ್ಮಪಾಲ್ ರವರ ಹೆಂಡತಿ ವಿದೇಶದವರಾಗಿದ್ದರು. ಧರ್ಮಪಾಲ್‌ರೊಂದಿಗೆ ನನ್ನ ಪರಿಚಯ ಸುಖೋದೇವರ ಆಶ್ರಮದಲ್ಲಾಯಿತು. ಅಂದಿನಿಂದ ಅವರು ನನ್ನ ಬಗ್ಗೆ ವಿಶೇಷವಾದ ಸ್ನೇಹವನ್ನು ಬೆಳಸಿಕೊಂಡಿದ್ದರು. ಅವರೊಂದಿಗೆ ಮಾತನಾಡುವುದಕ್ಕೆ ಯಾವ ಸಂಕೋಚವೂ ಅನಿಸುತ್ತಿರಲಿಲ್ಲ. ಜಯಪ್ರಕಾಶ್ ರೊಂದಿಗೆ ದಿಲ್ಲಿಗೆ ಒಂದು ಸಲ ಹೋಗಿದ್ದಾಗ ಧರ್ಮಪಾಲರು ನನ್ನನ್ನು ತಮ್ಮ ಮನೆಗೆ ಆಹ್ವಾನಿಸಿದ್ದರು. ವಯಸ್ಸಿನಲ್ಲಿ ನಾನು ಅವರಿಗಿಂತ ಕಿರಿಯವನಾಗಿದ್ದರೂ ಸಹ ತಂಬಾ ಪ್ರೀತಿಯಿಂದ ಮಾತನಾಡಿಸಿ ಆತಿಥ್ಯವನ್ನು ಮಾಡಿದ್ದರು. ಅದು ಇಂದು ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಮುಂದೆ ಅವರು ತಮ್ಮ ಇತರ ಸಂಶೋಧನೆಗಳ ಕಾರ್ಯ ನಿಮಿತ್ತ ಜಯಪ್ರಕಾಶರಿಂದ ದೂರವಾಗುತ್ತಾ ಬಂದರು. ಆದರೂ ಕೂಡ ಅಗತ್ಯವಿದ್ದಾಗಲೆಲ್ಲ ಜಯಪ್ರಕಾಶ್ ಮತ್ತು ಧರ್ಮಪಾಲರ ಸಮಾಗಮವಾಗುತಲೇ ಇರುತ್ತಿತ್ತು. 'ಅವಾರ್ಡ್' ಸಂಸ್ಥೆಯನ್ನು ಸ್ಥಾಪಿಸುವುದರೊಂದಿಗೆ ಆ ಸಂಸ್ಥೆಯು ಪ್ರಕಟಿಸುತ್ತಿದ್ದ 'ಅವಾರ್ಡ್ ಸಮಾಚಾರ'ವೆಂಬ ಇಂಗ್ಲೀಷ್ ಮತ್ತು ಹಿಂದಿಯಲ್ಲಿ 'ಗ್ರಾಮಸೇವಾ ಸಂಗಮ'ವೆಂಬ ತ್ರೈಮಾಸಿಕ ಪತ್ರಿಕೆಗಳ ಸಂಪಾದಕರಾಗಿಯೂ ಕೆಲಸ ಮಾಡಿದ್ದರು. ರಾಜಾಸ್ಥಾನದಲ್ಲಿಯ ಪ್ರಜಾತಂತ್ರಿಕ ವಿಕೇಂದ್ರಿಕರಣವೆಂಬ

ಅಧ್ಯಯನ ವರದಿಯನ್ನು, ಆಂಧ್ರಪ್ರದೇಶದಲ್ಲಿಯ ಪಂಚಾಯತ್ ರಾಜ್ ಎಂಬ ಅಧ್ಯಯನ ವರದಿಯನ್ನು ಪ್ರಕಟಿಸಿದ್ದರು ಇದೆಲ್ಲಕ್ಕಿಂತ ಮುಖ್ಯವಾಗಿ ಸಂವಿಧಾನ ರಚನಾ ಸಭೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ನಡೆದಂಥ ಚರ್ಚೆಯನ್ನು ಶೋಧಿಸಿ ತೆಗೆದು 'ಭಾರತೀಯ ರಾಜ್ಯ ವ್ಯವಸ್ಥೆಯಲ್ಲಿ ಮೂಲಾಧಾರ ಪಂಚಾಯತ್ ರಾಜ್ಯ'. ಎಂಬ ಪುಸ್ತಕವನ್ನು ಸಿದ್ದಪಡಿಸಿದ್ದರು. ಈ ಪುಸ್ತಕಕ್ಕೆ ಜಯಪ್ರಕಾಶ್ ನಾರಾಯಣರು ಮುನ್ನುಡಿಯನ್ನು ಬರೆದರು. ಆ ಮುನ್ನುಡಿಯಲ್ಲಿ ಜಯಪ್ರಕಾಶ್ ನಾರಾಯಣರು ಧರ್ಮಪಾಲರ ಈ ಮಹತ್ ಕೆಲಸವನ್ನು ಕುರಿತು ಮೆಚ್ಚುಗೆಯ ನುಡಿಗಳನ್ನಾಡಿದ್ದಾರೆ.

ಇಂಥ 'ಅವಾರ್ಡ್' ಸಂಸ್ಥೆಯ ಸದಸ್ಯತ್ವವನ್ನು ಟ್ರಸ್ಟ್ ಪಡೆಯಬೇಕೆನಿಸಿತ್ತು. ಆದ್ದರಿಂದ ಅವಾರ್ಡ್‌ನ ಸದಸ್ಯತ್ವವನ್ನು ಪಡೆಯಲಾಯಿತು. ಈಗಾಗಲೆ ತಿಳಿಸಿರುವಂತೆ 'ಅವಾರ್ಡ್' ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟವಾಗಿದೆ. ಅಂದರೆ ಸರ್ಕಾರೇತರ (NGO)ಸಂಸ್ಥೆಗಳ ಒಕ್ಕೂಟವಲ್ಲ. ಗಾಂಧಿ, ವಿನೋಭಾ ಮುಂತಾದವರ ವಿಚಾರಗಳ ಆಧಾರದ ಮೇಲೆ ಜನರ ಸಹಯೋಗದೊಂದಿಗೆ ಗ್ರಾಮೀಣ ಅಭಿವೃದ್ಧಿಯಲ್ಲಿ ತೊಡಗಿರುವಂಥ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ. ಜನಪದ ಸೇವಾ ಟ್ರಸ್ಟ್ ಇಂಥ ಒಂದು ಸಂಸ್ಥೆ ಆಗಿದ್ದುದರಿಂದ 'ಅವಾರ್ಡ್' ಸಂಸ್ಥೆಯ ಸದಸ್ಯತ್ವವನ್ನು ಪಡೆಯಬೇಕೆಂದು ಇಚ್ಛಿಸಿದ್ದರಲ್ಲಿ ಆಶ್ಚರ್ಯವೇನಿರಲಿಲ್ಲ. ಅಲ್ಲದೆ ಆ ಸಮಯದಲ್ಲಿ ಸ್ವತಃ ಜಯಪ್ರಕಾಶ್ ನಾರಾಯಣರೆ 'ಅವಾರ್ಡ್' ಸಂಸ್ಥೆಯ ಅಧ್ಯಕ್ಷರಾಗಿದ್ದರು. ಮತ್ತು ಧರ್ಮಪಾಲ್‌ರವರು ಕಾರ್ಯದರ್ಶಿಯವರಾಗಿದ್ದರು. ಆದ್ದರಿಂದ 'ಅವಾರ್ಡ್' ಸಂಸ್ಥೆಯ ಸದಸ್ಯತ್ವವನ್ನು ಪಡೆಯುವುದು ಮತ್ತು ಅದರ ಉದ್ದೇಶಗಳಿಗನುಸಾರವಾಗಿ ಕೆಲಸ ಮಾಡುವುದು ಹೆಮ್ಮೆಯ ವಿಷಯವಾಗಿತ್ತು. ಆದರೆ ಕ್ರಮೇಣ 'ಅವಾರ್ಡ್' ಸಂಸ್ಥೆ ನಿಲುಗಡೆಗೆ ಬಂದಿತು. ಕೆಲವು ವರ್ಷಗಳ ಹಿಂದೆ ಅದನ್ನು ಪುನಶ್ಚೇತನಗೊಳಿಸುವ ಪ್ರಯತ್ನವೂ ನಡೆಯಿತು. ಆದರೆ ಅದು ಸಾಧ್ಯವಾಗಲಿಲ್ಲ. ಏನೇ ಆದರೂ ಸ್ವತಂತ್ರ ಭಾರತದ ಸ್ವಯಂ ಸೇವಾ ಸಂಸ್ಥೆಗಳ ಇತಿಹಾಸದಲ್ಲಿ 'ಅವಾರ್ಡ್' ಒಂದು ಮಹತ್ವದ ಸ್ಥಾನವನ್ನು ಪಡೆದಿರುತ್ತದೆಂಬುದರಲ್ಲಿ ಸಂದೇಹವಿಲ್ಲ.

(ಮುಂದುವರಿಯುವುದು......)

ವಾಚಕ ಮಿತ್ರರಲ್ಲಿ ವಿನಂತಿ

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಅದರಲ್ಲಿಯೂ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ *(–ಸಂಪಾದಕರು)*

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at INDIVARA, Nagamangala
Phone : 08236 – 298754 e-mail : janapada@yahoo.com